ನಿಯಮ 69ರ ಮೇರೆಗೆ

ತೆಂಗಿನ ಮರಗಳಿಗೆ ನುಸಿರೋಗದ ಬಗ್ಗೆ ಚರ್ಚೆ

ಅಧ್ಯಕ್ಷರು : ನನಗಾದರೂ ಅನ್ನಿಸುತ್ತದೆ, ಈ ನುಸಿರೋಗ ಬಹಳ ಮುಖ್ಯವಾದ ಸಬ್ಜೆಕ್ಟ್. ಬೇಕಾದರೆ ಇನ್ನೊಂದು ದಿವಸ ಇದನ್ನು ತೆಗೆದುಕೊಳ್ಳೋಣ. ಇದರ ಬಗ್ಗೆ ಸ್ವಲ್ಪ ಹೆಚ್ಚು ಕಡಿಮೆ ಮಾತನಾಡಿದ್ದಾರೆ. ಇಲ್ಲಿಗೆ ಕೈಬಿಡುವುದು ಅಷ್ಟು ಸಮಂಜಸವಲ್ಲ. ಮತ್ತೆ ಇದರ ಬಗ್ಗೆ ಇನ್ನೂ ಮಾತನಾಡುವವರಿದ್ದಾರೆ. ಬೇಕಾದರೆ ಅವರು ಮಾತನಾಡಲಿ. ಹಾಗಾದರೆ ಮಾನ್ಯ ಆತ್ಮಾನಂದರವರು ಇದರ ಬಗ್ಗೆ ಮಾತನಾಡಲಿ.

+ ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಅಧ್ಯಕ್ಷರೇ, ಈ ನುಸಿಪೀಡೆಯಿಂದ ಆಗಿರುವ ಅನಾಹುತದ ಬಗ್ಗೆ ಕಳೆದ ಎರಡು ದಿವಸಗಳಿಂದಲೂ ಕೂಡ ಈ ಸದನದಲ್ಲಿ ಸಮಗ್ರವಾಗಿ ಚರ್ಚೆ ನಡೆದಿದೆ. ನಾನು ಕೂಡ ಅದಕ್ಕೆ ಧ್ವನಿಗೂಡಿಸುತ್ತಾ, ಈ ಬಹುಮುಖ ಉಪಯೋಗವುಳ್ಳಂಥ ಈ ತೆಂಗಿನ ಬೆಳೆಗೆ ಈ ಮಾರಕರೋಗ ಬಂದಿರುವುದು ರೈತರ ಮೇಲೆ ಬಹಳ ದುಷ್ಪರಿಣಾಮವನ್ನು ಬೀರಿರತಕ್ಕಂಥಾದ್ದು ಆಗಿದೆ. ಈ ರಾಜ್ಯದ 14 ಜಿಲ್ಲೆಗಳಲ್ಲಿ ಸುಮಾರು 65 ಲಕ್ಷ ತೆಂಗಿನ ಮರಗಳಿಗೆ ಈ ನುಸಿರೋಗ ತಗುಲಿದೆ. ಇದಕ್ಕೆ ಮಂಡ್ಯಜಿಲ್ಲೆ ಕೂಡ ಹೊರತಾಗಿಲ್ಲ. ನಮ್ಮ ಜಿಲ್ಲೆಯ ಮದ್ದೂರು, ಕೆ.ಆರ್. ಪೇಟೆ, ಪಾಂಡವಪುರ ಹೀಗೆ ಹಲವಾರು ತಾಲ್ಲೂಕುಗಳಲ್ಲಿ ಈ ಒಂದು ನುಸಿಪೀಡೆಗೆ ಬಲಿಯಾಗಿ ಸಾಕಷ್ಟು ಬೆಳೆ ನಷ್ಟವನ್ನು ನಮ್ಮ ರೈತರುಗಳು ಅನುಭವಿಸುತ್ತಿರತಕ್ಕಂಥಾದ್ದು ತಮ್ಮ ಮೂಲಕ ನಾನು ಈ ಸದನದ ಗಮನಕ್ಕೆ ತರಬಯಸುತ್ತೇನೆ. ಜಿಲ್ಲಾಮಟ್ಟದಲ್ಲಿ ಟಾಸ್ಕ್ ಫೋರ್ಸ್‌ಗಳನ್ನು ರಚಿಸಿದ್ದರೂ ಕೂಡ ಅದು ಇನ್ನು ಕೂಡ ನಮ್ಮ ರೈತರು ನಿರೀಕ್ಷಿಸಿದ ರೀತಿಯಲ್ಲಿ ಕಾರ್ಯವನ್ನು ಮಾಡಲಿಕ್ಕೆ ಸಾಧ್ಯವಾಗುತ್ತಿಲ್ಲ. ಈ ಕಾರ್ಯ ಸಮರೋಪಾದಿಯಲ್ಲಿ ಆಗಬೇಕಾಗಿತ್ತು ಎಂದು ರೈತರ ಭಾವನೆ. ಆ ರೈತರ ಭಾವನೆಗೆ ಅನುಗುಣವಾಗಿ ಕೂಡ ಪರಿಣಾಮಕಾರಿಯಾಗಿ ಈ ಒಂದು ರೋಗವನ್ನು ತಡೆಗಟ್ಟತಕ್ಕಂಥ ಕೆಲಸವನ್ನು ಸರ್ಕಾರ ಕೈಗೊಳ್ಳಬೇಕು ಎಂದು ನಾನು ಮಾನ್ಯ ಮಂತ್ರಿಗಳಲ್ಲಿ ಆಗ್ರಹಪೂರ್ವಕವಾಗಿ ಹಾಗೂ ಒತ್ತಾಯಪೂರ್ವಕವಾಗಿ ವಿನಂತಿಸುವುದಕ್ಕೆ ಬಯಸುತ್ತೇನೆ. ಕೀಟನಾಶಕಗಳು ಕೂಡ ಇನ್ನು ಸರಿಯಾದ ಪ್ರಮಾಣದಲ್ಲಿ ಆಗತ್ಯವಿರುವ ಪ್ರಮಾಣದಲ್ಲಿ ನಮ್ಮ ಜಿಲ್ಲೆಗಳಿಗೆ ತಲುಪಿಲ್ಲ ಎನ್ನುವುದನ್ನು ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಈ ಕೀಟನಾಶಕಗಳನ್ನು ಆಗತ್ಯವಿದ್ದಷ್ಟು ಕೂಡ ತತ್‌ಕ್ಷಣ ಸರಬರಾಜು ಮಾಡಿ ಈ ಒಂದು ರೋಗಕ್ಕೆ ಬಲಿಯಾಗಿರುವ ರೈತರ ನೆರವಿಗೆ ಹೋಗಬೇಕು. ಇದು ರೈತರನ್ನು ಒಳಗೊಂಡ ಕಾರ್ಯಕ್ರಮ ಇನ್ನೂ ಆಗಿಲ್ಲ. ಈ ಕಾರ್ಯಕ್ರಮ ಜನಪರ ಕಾರ್ಯಕ್ರಮವಾಗಿ ರೈತರನ್ನು ಸಾಧ್ಯವಾದಷ್ಟು ಕೂಡ ಈ ಕಾರ್ಯಕ್ರಮದಲ್ಲಿ ತೊಡಗಿಸಿ ಕೊಂಡರೆ ಈ ಕೀಟನಾಶಕ ಔಷಧಿಗಳನ್ನಾಗಲಿ ಅಥವಾ ಟಾಸ್ಕ್‌ಫೋರ್ಸ್ ಕೆಲಸವನ್ನಾಗಲಿ ಸುಲಲಿತವಾಗಿ ಸಾಗಲಿಕ್ಕೆ ಸಾಧ್ಯವಾಗುತ್ತದೆ.

12.40 ಪಿ.ಎಂ

ಈ ದಿಸೆಯಲ್ಲಿ ಈ ಟಾಸ್ಕ್‌ಫೋರ್ಸ್‌ನವರು ಕೂಡ ರೈತರುಗಳ ಸಹಕಾರವನ್ನು ತೆಗೆದುಕೊಂಡು

ಈ ರೋಗವನ್ನು ತಡೆಗಟ್ಟತಕ್ಕ ಕೆಲಸವನ್ನು ಮಾಡಬೇಕೆಂದು ಹೇಳಬಯಸುತ್ತೇನೆ. ಪ್ರವಾಹ ಪೀಡಿತ ಪ್ರದೇಶಗಳಲ್ಲಿ, ಪ್ರಕೃತಿ ವಿಕೋಪಕ್ಕೆ ತುತ್ತಾದ ಕಡೆಗಳಲ್ಲಿ ಜನರಿಗೆ ಯಾವ ರೀತಿಯಲ್ಲಿ ಪರಿಹಾರವನ್ನು ಕೊಡುತ್ತೀರೋ ಆ ರೀತಿಯಲ್ಲಿ ಬೆಳೆಗಳನ್ನು ಕಳೆದುಕೊಂಡಿರುವ ರೈತರಿಗೆ ಪರಿಹಾರವನ್ನು ಕೊಡುವುದು ಅವಶ್ಯಕವಾಗಿದೆ. ಏಕೆಂದರೆ ತೆಂಗಿನ ಗಿಡಗಳಿಗೆ ಬಂದಿರುವ ರೋಗ ರೈತರುಗಳಿಗೇ ಬಂದಂತಾಗಿದೆ. ರೈತರು ಬಹಳ ಕಷ್ಟವನ್ನು ಪಡುತ್ತಿದ್ದಾರೆ. ವ್ಯವಸಾಯ ಮಾಡುವುದು ಇಂದು ಬಹಳ ಕಷ್ಟಕರವಾಗಿರುವುದರಿಂದ ಈ ರೀತಿ ತೋಟಗಾರಿಕಾ ಬೆಳೆಗಳಿಗೆ ಮಾರು ಹೋಗಿರುವ ಸಂದರ್ಭದಲ್ಲಿ ತೆಂಗಿನ ಬೆಳೆ ಪ್ರಮುಖವಾಗಿದೆ, ಈ ಬೆಳೆಗೆ ರೋಗ ತಗುಲಿ ರೈತರು ಬಹಳ ದುಸ್ಥಿತಿಯಲ್ಲಿದ್ದಾರೆ. ಅವರ ನೆರವಿಗೆ ಸರ್ಕಾರ ಬರಬೇಕು. ತೋಟಗಾರಿಕಾ ಇಲಾಖೆಯಲ್ಲಿ ಸಾಕಷ್ಟು ಸಿಬ್ಬಂದಿ ಇರುವುದಿಲ್ಲ. ನಮ್ಮ ಜಿಲ್ಲೆಯಲ್ಲೂ ಸಹ ಹಾಗೆಯೇ ಆಗಿದೆ. ಏನು ಎಕ್ಸಟೆನ್‌ಷನ್ ಕೆಲಸವಾಗಬೇಕೊ ಅದು ನಡೆಯುತ್ತಿಲ್ಲ. ಈ ಕಾರ್ಯದಲ್ಲಿ ಮತ್ತಷ್ಟು ತೋಟಕಾರಿಕಾ ಸಿಬ್ಬಂದಿಯನ್ನು ತೊಡಗಿಸಬೇಕು. ಅದರ ಜೊತೆಗೆ ದೈನಂದಿನ ಕೆಲಸಕಾರ್ಯಗಳಲ್ಲಿ ಸಿಬ್ಬಂದಿಯನ್ನು ತೊಡಗಿಸುವಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ತೋಟಗಾರಿಕಾ ಇಲಾಖೆಯಲ್ಲಿ ಸಂಶೋಧನಾ ವಿಭಾಗವನ್ನು ಮಾಡಿದರೆ ಒಳ್ಳೆಯದು. ಏಕೆಂದರೆ ತೋಟಗಾರಿಕಾ ಬೆಳೆಗಳು ಪದೇ ಪದೇ ರೋಗಗಳಿಗೆ ತುತ್ತಾಗುತ್ತಿದೆ. ಆದ್ದರಿಂದ ಈ ರೋಗಗಳನ್ನು ತಡೆಗಟ್ಟುವಲ್ಲಿ ಇಂಥ ಸಂಶೋಧನಾ ವಿಭಾಗದ ಸ್ಥಾಪನೆ ಅಗತ್ಯವಾಗಿದೆ. ಈ ರೀತಿ ರೋಗಗಳನ್ನು ತಡೆಗಟ್ಟುವಲ್ಲಿ ಕೇಂದ್ರದಿಂದ ರಾಜ್ಯಕ್ಕೆ ಏನಾದರೂ ಸಹಾಯ, ಸಹಕಾರ ಬಂದಿದೆಯೇ? ಈ ರೀತಿ ಬಂದಿದ್ದರೆ ಏನು ಬಂದಿದೆ ಎಂಬ ಬಗ್ಗೆ ತಿಳಿಸಬೇಕು. ಈಗ ಇರುವ ಕಾರ್ಯವೈಖರಿಯನ್ನು ಮಾರ್ಪಾಡು ಮಾಡಿ ಇನ್ನು ಅರ್ಥಪೂರ್ಣವಾಗಿ ರೈತರ ಮನಮುಟ್ಟುವಂತೆ ಈ ಕಾರ್ಯವನ್ನು ಮಾಡದಿದ್ದರೆ ರೈತರು ತುಂಬ ನಷ್ಟಕ್ಕೆ ಒಳಗಾಗಬೇಕಾಗುತ್ತದೆ ಎಂದು ಹೇಳಿ ತಾವು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಸಿ. ಚೆನ್ನಿಗಪ್ಪ (ಕೊರಟಗೆರೆ) : ಮಾನ್ಯ ಅಧ್ಯಕ್ಷರೆ ಈ ನುಸಿ ರೋಗವು ರೋಗವಲ್ಲ, ಫೀಡೆ ಎಂದು ನಮ್ಮ ಸ್ನೇಹಿತರು ಹೇಳುತ್ತಿದ್ದರು. ಈ ರೋಗ ಎಲ್ಲ ಕಡೆ ಬಂದು ಆರೇಳು ತಿಂಗಳು ಆಗಿದೆ. ಇದನ್ನು ತಡೆಗಟ್ಟಲು ಇಷ್ಟು ದಿವಸ ವಿಳಂಬ ಮಾಡಿಕೊಂಡು ಬಂದುದರ ಬಗ್ಗೆ ನನಗೆ ಅರ್ಥವಾಗುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಯವರು ತುಮಕೂರಿಗೆ ಬಂದಿದ್ದಾಗ ಇದರ ಬಗ್ಗೆ ಕೇಳಿಕೊಂಡೆವು. ತುಮಕೂರು ಜಿಲ್ಲೆ ಅತ್ಯಂತ ಹೆಚ್ಚು ತೆಂಗನ್ನು ಬೆಳೆಯುವ ಜಿಲ್ಲೆ. ಎಲ್ಲಾ ಗ್ರಾಮ, ಹೋಬಳಿ, ತಾಲ್ಲೂಕು ಮಟ್ಟದಲ್ಲಿ ಪ್ರತಿಯೊಂದು ಊರಿನಲ್ಲಿ ಇದನ್ನು ಹೇಗೆ ತಡೆಗಟ್ಟಬೇಕು ಎಂಬ ಬಗ್ಗೆ ಬೋಧನೆ ಮಾಡಿಸಬೇಕೆಂದು ಕೇಳಿಕೊಂಡಿದ್ದೆವು. ಆದರೆ ಇದುವರೆಗೆ ಆ ರೀತಿ ಒಂದೂ ಕಾರ್ಯಾಗಾರವನ್ನು ಮಾಡಲಿಲ್ಲ. ಇದರ ಬಗ್ಗೆ ಸರ್ಕಾರದಿಂದ ಯಾವುದೇ ಸೂಚನೆ ಬರಲಿಲ್ಲ. ನಾವು ನೀವೆಲ್ಲರೂ ರೈತರೆ. ನೂರಕ್ಕೆ ಎಂಭತ್ತು ಭಾಗದ ಶಾಸಕರಿಗೆ ತೆಂಗಿನ ಮರಗಳು ಇದೆ. ನಾವುಗಳು ಔಷಧಿಯನ್ನು ಕೊಂಡುಕೊಂಡಾದರು ಸಿಂಪರಣೆ ಮಾಡಿಸುತ್ತೇವೆ. ಆದರೆ ಬಡವರು 20, 30, 50 ಮರಗಳನ್ನು ಇಟ್ಟುಕೊಂಡಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರು

ಔಷಧಿಯನ್ನು ಕೊಂಡುಕೊಳ್ಳಲು ಸಾಧ್ಯವಾಗುವುದಿಲ್ಲ. ಅರ್ಧ ಬೆಲೆಗೆ ತೆಗೆದುಕೊಳ್ಳಿ ಎಂದು ಸರ್ಕಾರ ಹೇಳಿದರೆ ಅದು ಸಾಧ್ಯವಾಗುವುದಿಲ್ಲ. ಆದ್ದರಿಂದ ಪರಿಶಿಷ್ಟ ಜಾತಿ ಮತ್ತು ಪಂಗಡದವರು ಎಲ್ಲೆಲ್ಲಿ ಮರಗಳನ್ನು ಹೊಂದಿದ್ದಾರೆ ಅವರಿಗೆ ಉಚಿತವಾಗಿ ಔಷಧಿಯನ್ನು ಸರ್ಕಾರ ಒದಗಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಆ ರೀತಿ ಮಾಡಿದರೆ ನಿಜವಾಗಿಯೂ ಉತ್ತಮವಾದ ಕೆಲಸ ಮಾಡಿದಂತಾಗುತ್ತದೆ. ನುಸಿ ರೋಗವನ್ನು ತಡೆಯುವ ನಿಟ್ಟನಲ್ಲಿ ಅಧಿಕಾರಿಗಳು ಗುಂಪು ಗುಂಪಾಗಿ ಹೋಗಿ ಪರಿಶೀಲನೆ ಮಾಡಬೇಕು ಎಂದು ಮಾನ್ಯ ಸಚಿವರು ವ್ಯವಸ್ಥೆ ಮಾಡಿದ್ದಾರೆ. ಆದರೆ ಈಗ ಕೊಡುತ್ತಿರುವ ಔಷಧಿ ಉತ್ತಮವಾಗಿಲ್ಲವೆಂದು ಕೆಲವರು ಹೇಳುತ್ತಿದ್ದಾರೆ. ಇದು ಡೂಪ್ಲಿಕೇಟ್ ಔಷಧಿಯಾಗಿದೆ, ಸೀಬಾ ಕಂಪನಿಯ ಔಷಧಿಯನ್ನು ತೆಗೆದುಕೊಂಡರೆ ಒಳ್ಳೆಯದು ಎಂದು ಹೇಳುತ್ತಿದ್ದಾರೆ. ಆದ್ದರಿಂದ ಹಾಲಿ ಕೊಡುತ್ತಿರುವ ಔಷಧಿಯ ಬಗ್ಗೆ ತಜ್ಞರಿಂದ ಪರಿಶೀಲನೆ ಮಾಡಿಸಿ ಉತ್ತಮವಾದ ಔಷಧಿಯನ್ನು ಒದಗಿಸಿದರೆ ಒಳ್ಳೆಯದು. ಇಲ್ಲದಿದ್ದರೆ ಔಷಧಿ ಸಿಂಪರಣೆ ಮಾಡಿಯೂ ಪ್ರಯೋಜನವಾಗುವುದಿಲ್ಲ. ಇದರಿಂದ ಸರ್ಕಾರಕ್ಕೆ ಮತ್ತು ರೈತರಿಗೆ ಬಹಳ ನಷ್ಟವಾಗುತ್ತದೆ. ರೈತರಿಗೇನು ಹೆಚ್ಚಿನ ಆದ್ಯತೆಯನ್ನು ಕೊಡುವುದಾಗಿ ಸರ್ಕಾರ ಹೇಳಿದೆ ಆ ದಿಸೆಯಲ್ಲಿ ಕಾರ್ಯಪ್ರವೃತ್ತರಾಗಬೇಕು. ಕಾರಣ ನೂರಕ್ಕೆ ಎಂಬತ್ತು ಭಾಗದ ಜನರು ವ್ಯವಸಾಯವನ್ನೇ ಅವಲಂಬಿಸಿದ್ದಾರೆ. ತೆಂಗಿನ ಮರವನ್ನು ದೇವರು ಎಂದು ಪೂಜೆ ಮಾಡುವವರು ನಾವು. ನೂರು ತೆಂಗಿನ ಮರವಿದ್ದರೆ ಒಬ್ಬ ಐ.ಎ.ಎಸ್ ಅಧಿಕಾರಿಯಿದ್ದಂತೆ ಎಂದು ತಿಳಿದಕೊಂಡು ಇವತ್ತು ತೆಂಗಿನ ಮರಗಳ ಮೇಲೆಯೇ ಅವಲಂಬಿಸಿ ಕೆಲಸ ಮಾಡುತ್ತಿರುವ ಕಾಲದಲ್ಲಿ ಇದಕ್ಕೆ ಬಂದಿರುವ ರೋಗವನ್ನು ತಡೆಗಟ್ಟುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಕೇಂದ್ರ ಸರ್ಕಾರವಾಗಿರಬಹುದು, ರಾಜ್ಯ ಸರ್ಕಾರವಾಗಿರಬಹುದು ರೈತರಿಗೆ ಸಹಾಯ ಮಾಡುವುದು ಅವರ ಆದ್ಯ ಕರ್ತವ್ಯವಾಗಿದೆ. ಪ್ರತಿಯೊಂದು ಹಳ್ಳಿಯಲ್ಲಿ ಸಮರೋಪಾದಿಯಲ್ಲಿ ಕ್ರಮ ತೆಗೆದುಕೊಂಡರೆ ಮಾತ್ರ ಇದನ್ನು ಸಂಪೂರ್ಣವಾಗಿ ತಡೆಗಟ್ಟಲು ಸಾಧ್ಯ. ಒಂದು ಊರಿಗೆ ಔಷಧಿಯನ್ನು ಕೊಟ್ಟು ಮತ್ತೊಂದು ಊರಿಗೆ ಕೊಡದಿದ್ದರೆ ಮತ್ತೆ ಮೂರು ತಿಂಗಳಿನಲ್ಲಿ ಔಷಧಿಯನ್ನು ಕೊಡದಿದ್ದ ಊರಿನಿಂದ ರೋಗ ಹರಡುವ ಸಾಧ್ಯತೆಗಳು ಹೆಚ್ಚಾಗಿರುತ್ತದೆ. ಇದರಿಂದ ಸರ್ಕಾರಕ್ಕೆ ನಷ್ಟವಾಗುತ್ತದೆ. ಆದ್ದರಿಂದ ದಯಮಾಡಿ ಒಂದು ತಿಂಗಳು ಇಲ್ಲವೆ ಹದಿನೈದು ದಿವಸಗಳ ಕಾರ್ಯಕ್ರಮವನ್ನು ಹಾಕಿಕೊಂಡು ರಾಜ್ಯದ ಹಳ್ಳಿ ಹಳ್ಳಿಗಳ ಮೂಲೆ ಮೂಲೆಗೂ ಔಷಧಿಯನ್ನು ಒದಗಿಸುವ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ನನ್ನ ಕ್ಷೇತ್ರದಲ್ಲಿ ಐದು ಸಾವಿರ ಎಕರೆಯ ದೊಡ್ಡದಾದ ಮರೀಗೌಡ, ದೊಡ್ಡಸಾಕೆರೆ ಫಾರಂ ಎಂದು ಇದೆ. ಅಲ್ಲಿಗೆ ಯಾವ ಪುಣ್ಯಾತ್ಮ ಅಧಿಕಾರಿಯನ್ನು ಹಾಕಿದ್ದೀರೋ, ಕಳೆದ ಆರು ವರ್ಷಗಳಿಂದ ಲಕ್ಷಾಂತರ ರೂಪಾಯಿಗಳ ಲೆಕ್ಕವನ್ನು ಬರೆದು ಕೊಂಡು ಫಾರಂನಲ್ಲಿ ಒಂದೇ ಒಂದು ಗಿಡವನ್ನು ಬೆಳೆದಿಲ್ಲ. ಐದು ಸಾವಿರ ಎಕರೆಯ ದೊಡ್ಡ ಫಾರಂ ಮಾಡಿ ಅದರಿಂದ ಸರ್ಕಾರಕ್ಕೆ ಇವತ್ತು ಐದು ನೂರು ರೂಪಾಯಿಗಳೂ ಬರುತ್ತಿಲ್ಲ. ಇದರ ಬಗ್ಗೆ ನಾನು ಹಿಂದಿನ ಸದನದಲ್ಲಿ ಹೇಳಿದ್ದೆ, ಮಾನ್ಯ ಸಚಿವರಿಗೆ ಪತ್ರವನ್ನು ಸಹ ಬರೆದಿದ್ದೆ. ಒಂದು ದಿವಸವೂ ಆ ಅಧಿಕಾರಿ ಬಗ್ಗೆ ವಿಚಾರಣೆ ಮಾಡಲಿಲ್ಲ, ಕ್ರಮ ತೆಗೆದುಕೊಳ್ಳಲಿಲ್ಲ. ಆದ್ದರಿಂದ ಆ ಅಧಿಕಾರಿಯ ಬಗ್ಗೆ ಕೂಡಲೆ ವಿಚಾರಣೆ ಮಾಡಿಸಿ ಉತ್ತಮವಾದ

ಯಾವ ಅಧಿಕಾರಿಯನ್ನು ಬೇಕಾದರೂ ಅಲ್ಲಿಗೆ ಪೋಸ್ಟ್ ಹಾಕಿ ಮಾಡಿ ಎಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಯಾವುದೇ ಅಧಿಕಾರಿಯನ್ನು ಹಾಕಿ ಅದರಲ್ಲಿ ನಾನು ಹಸ್ತಕ್ಷೇಪ ಮಾಡುವುದಿಲ್ಲ. ಆದಷ್ಟೂ ಉತ್ತಮರಾದ ಅಧಿಕಾರಿಗಳನ್ನು ಅಲ್ಲಿ ಹಾಕಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಆ ಮೂಲಕ ಸರ್ಕಾರದ ಆಸ್ತಿಯಾದ ಆ ಫಾರಂನ್ನು ಉಳಿಸಬೇಕೆಂದು ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಈ ತೆಂಗಿನ ರೋಗದ ಬಗ್ಗೆ ಬೇರೆ ದೇಶದ ತಜ್ಞರನ್ನು ಕರೆಸಿ ಪರಿಶೀಲನೆ ಮಾಡಿಸಿದರೆ ಒಳ್ಳೆಯದು. ನಮ್ಮ ಅಧಿಕಾರಿಗಳು ಇಂಥ ಔಷಧಿಯನ್ನು ಹಾಕಿ ಹೋಗುತ್ತದೆ ಎಂದು ಹೇಳಿದ್ದರು. ನಮ್ಮ ನೆಲಮಂಗಳದಲ್ಲಿ ಶ್ರೀ ಕೃಷ್ಣಪ್ಪ ಎಂಬುವವರು ಅದೇ ರೀತಿ ಮಾಡಿದ್ದರು, ಆದರೆ ಅದರಿಂದ ಏನೂ ಪ್ರಯೋಜನವಾಗಲಿಲ್ಲ. ಇದುವರೆಗೆ ಆ ರೋಗ ಹೋಗಿಲ್ಲ. ಆದ್ದರಿಂದ ತಜ್ಞರನ್ನು ಕರೆಸಿ ಪರಿಶೀಲನೆ ಮಾಡಿಸಿ ಕ್ರಮ ತೆಗೆದುಕೊಂಡರೆ ಒಳ್ಳೆಯದು. ರೈತರಿಗೆ ಆಗಿರುವ ಅನ್ಯಾಯವನ್ನು ಸರ್ಕಾರ ತಡೆಗಟ್ಟುತ್ತದೆ ಎಂದು ನನಗೆ ಸರ್ಕಾರದಲ್ಲಿ ನಂಬಿಕೆ ಇದೆ. ಮಾನ್ಯ ಮುಖ್ಯಮಂತ್ರಿಯವರು ಇತ್ತೀಚೆಗೆ ಒಂದು ಕಾರ್ಯಕ್ರಮದಲ್ಲಿ ಮಾತನಾಡುತ್ತಾ, ರೈತರಿಗೆ ಒದಗುವ ಕಷ್ಟಗಳ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳುತ್ತೇವೆ, ಒಂದು ನಿಮಿಷ ಕೂಡ ತಡ ಮಾಡುವುದಿಲ್ಲವೆಂದು ಹೇಳಿದ್ದರು. ಇದು ನಿಜವಾಗಿಯೂ ಸ್ವಾಗತ ಮಾಡುವ ವಿಚಾರವಾಗಿದೆ. ಆ ನಿಟ್ಟಿನಲ್ಲಿ ಇಲ್ಲಿನ ಸದಸ್ಯರುಗಳೇನು ಈ ನುಸಿ ರೋಗದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಅದನ್ನು ಅತ್ಯಂತ ಮುಖ್ಯವಾದ ವಿಚಾರವೆಂದು ಪರಿಗಣಿಸಿ ಕೂಡಲೆ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಹಾಗೆಯೇ ನನ್ನ ತಾಲ್ಲೂಕಿನಲ್ಲಿರುವ ಮರಿಗೌಡ ಫಾರಂನ್ನು ಸಹ ಅಭಿವೃದ್ಧಿ ಪಡಿಸಿ ಅದರಿಂದ ಉತ್ಪಾದನೆ ಬರುವ ರೀತಿಯಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳಲಿ ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಸಚಿವರು ಇಲ್ಲಿ ಆಗಿರುವ ಅನ್ಯಾಯದ ಬಗ್ಗೆ ನನ್ನ ಗಮನಕ್ಕೆ ಬಂದಿದೆ, ಅದನ್ನು ಸರಿಪಡಿಸುತ್ತೇನೆಂದು ಇತ್ತೀಚೆಗೆ ಹೇಳಿದ್ದಾರೆ. ತೋಟಗಾರಿಕೆಯಲ್ಲಿ ಹೆಚ್ಚು ಅನುಭವವಿರುವ ಕಾರಣ ಅವರು ಈ ದಿಕ್ಕಿನಲ್ಲಿ ಒಳ್ಳೆಯ ಕೆಲಸವನ್ನು ಮಾಡುತ್ತಾರೆಂದು ನಂಬಿರುತ್ತೇನೆ. ಆ ಕೆಲಸವನ್ನು ಮಾಡಬೇಕೆಂದು ಅವರಲ್ಲಿ ಪ್ರಾರ್ಥನೆ ಮಾಡಿ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಷಡಕ್ಷರಿ ಕೆ. (ತಿಪಟೂರು) : ಮಾನ್ಯ ಅಧ್ಯಕ್ಷರೆ, ತೆಂಗಿಗೆ ಬಂದಿರುವ ನುಸಿ ರೋಗದ ಬಗ್ಗೆ ಎಲ್ಲಾ ಸದಸ್ಯರು ಈಗಾಗಲೆ ಬಹಳ ಕಳಕಳಿಯಿಂದ ಪ್ರಸ್ತಾಪ ಮಾಡಿದ್ದಾರೆ. ಹೆಚ್ಚಾಗಿ ತೆಂಗನ್ನು ಬೆಳೆಯುವ ಪ್ರದೇಶದ ಪ್ರತಿನಿಧಿಯಾಗಿ, ಇದರ ಬಗ್ಗೆ ಅಲ್ಪಸ್ವಲ್ಪ ಮಾಹಿತಿಯನ್ನು ಹೊಂದಿರುವವನಾಗಿ ನಾನು ಇಲ್ಲಿ ಒಂದೆರಡು ವಿಚಾರವನ್ನು ಪ್ರಸ್ತಾಪ ಮಾಡಬಯಸುತ್ತೇನೆ. ನನಗೆ ಬಂದಿರುವ ಮಾಹಿತಿ ಪ್ರಕಾರ ನುಸಿ ರೋಗವು ಸುಮಾರು ಎರಡು ವರ್ಷಗಳ ಹಿಂದೆ ಬೆಂಗಳೂರಿನ ವಿಮಾನ ನಿಲ್ದಾಣದಿಂದ ಪ್ರಾರಂಭವಾಗಿ ಇಡೀ ಸುಮಾರು ಎಂಟು ಹತ್ತು ಜಿಲ್ಲೆಯಲ್ಲಿ ವ್ಯಾಪಕವಾಗಿ ಹರಡಿದೆ. ಇದರ ಬಗ್ಗೆ ಇಲಾಖೆಯವರು ಬಹಳ ತಡವಾಗಿ ಕಾರ್ಯಕ್ರಮವನ್ನು ಹಮ್ಮಿಕೊಂಡರು. ಆದರೂ ಇದನ್ನು ಸಂಪೂರ್ಣವಾಗಿ ತಡೆಗಟ್ಟಲು ತ್ವರಿತವಾಗಿ ಯಾವುದೇ ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲ. ಅಂಥ ಒಂದು ಪರಿಸ್ಥಿತಿಯಲ್ಲಿ, ನಮ್ಮ ಜಿಲ್ಲೆಯಲ್ಲಿ, ಅದರಲ್ಲೂ ಮುಖ್ಯವಾಗಿ

ಚಿಕ್ಕನಾಯಕನಹಳ್ಳಿ, ತುರುವೇಕೆರೆ, ತಿಪಟೂರು, ಗುಬ್ಬಿ ಪ್ರದೇಶಗಳಲ್ಲಿ ಈ ರೋಗ ಹೆಚ್ಚಾಗಿ ಹರಡಿದೆ. ಹಿಂದೆ ಕಪ್ಪು ತಲೆ ಹುಳುವಿನ ರೋಗ ಬಂದಿದ್ದರ ಬಗ್ಗೆ ತಮಗೆಲ್ಲ ತಿಳಿದಿದೆ. ಆ ರೋಗದಿಂದ ಗಿಡ ನಾಶವಾಗುತ್ತಿತ್ತು, ಐದು ಹತ್ತು ವರ್ಷಗಳ ಕಾಲ ಆ ಗಿಡ ಚೇತರಿಸಿಕೊಳ್ಳುತ್ತಿರಲಿಲ್ಲ. ಆದರೆ ಈಗ ಬಂದಿರುವ ನುಸಿ ರೋಗವು ತೆಂಗಿನ ಉತ್ಪನ್ನ ಏನು ಬರುತ್ತದೆ ಅದಕ್ಕೇ ಬಂದಿದೆ, ಬೆಳೆ ಸಂಪೂರ್ಣವಾಗಿ ನಾಶವಾಗುತ್ತದೆ. ಮತ್ತೆ ಆ ಬೆಳೆ ಪಡೆಯಲು ಎರಡು ವರ್ಷಗಳ ಕಾಲ ಬೇಕಾಗುತ್ತದೆ. ಇದರ ಬಗ್ಗೆ ಹಿರಿಯ ಸದಸ್ಯರಾದ ಮಾನ್ಯ ಶ್ರೀನಿವಾಸಗೌಡರವರು ಒಂದು ವಿಚಾರವನ್ನು ಹೇಳಿದರು. ಎರಡು ವರ್ಷಗಳ ಹಿಂದೆ ಅವರು ದೆಹಲಿಗೆ ಹೋಗಿದ್ದಾಗ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಸಂಶೋಧನೆ ಮಾಡುವವರನ್ನು ಸಂಪರ್ಕ ಮಾಡಿ, ಸರ್ಕಾರದ ಕಾರ್ಯದರ್ಶಿಗಳನ್ನು ಸಹ ಅವರ ಜೊತೆ ತೋಟಗಾರಿಕಾ ಸಚಿವರು ಕಳಿಸಿಕೊಟ್ಟಿದ್ದರು. ನಾವು ಅಲ್ಲಿ ಮನವಿ ಕೊಟ್ಟಾಗ ಅಲ್ಲಿಂದ ಒಂದು ನಿಯೋಗವು ಸಹ ಬಂದಿತು. ಬಹುಶಃ ತಮಗೆಲ್ಲರಿಗೂ ತಿಳಿದಿರುವಂತೆ ಆ ನಿಯೋಗದವರು ಆ ಸ್ಥಳವನ್ನು ಪರಿಶೀಲನೆ ಮಾಡಿ ರಾಜ್ಯದ 4-5 ತಾಲ್ಲೂಕುಗಳಲ್ಲಿ ಈ ರೋಗವನ್ನು ಯಾವ ರೀತಿಯಾಗಿ ನಿಯಂತ್ರಿಸಬೇಕೆಂಬ ಬಗ್ಗೆ ಕಾರ್ಯಕ್ರಮ ಹಾಕಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದಾರೆ. ಇಷ್ಟೇ ಅಲ್ಲದೆ, ನಾವು ಕೇಂದ್ರ ಸರ್ಕಾರಕ್ಕೂ ಮನವಿ ಸಲ್ಲಿಸಿದ್ದೇವೆ. ಇವೊತ್ತು ಇದಕ್ಕಾಗಿ ರಾಜ್ಯ ಸರ್ಕಾರ ಕೊಡತಕ್ಕಂಥ ಹಣ ಸಾಕಾಗುವುದಿಲ್ಲವಾದ್ದರಿಂದ ಕೇಂದ್ರ ಸರ್ಕಾರದವರು ಯೋಜನ ಮಾಡತಕ್ಕಂಥ ಸಂದರ್ಭದಲ್ಲಿ ಬಜೆಟ್‌ನಲ್ಲಿ ಸುಮಾರು ಇಪ್ಪತ್ತು ಕೋಟಿ ರೂಪಾಯಿಗಳಷ್ಟು ಹಣವನ್ನು ತೆಗೆದಿಟ್ಟು ತೆಂಗು ಬೆಳೆಗೆ ಬರತಕ್ಕಂಥ ರೋಗದ ನಿವಾರಣೆಗಾಗಿ ಆ ಹಣವನ್ನು ಒದಗಿಸಿಕೊಡುವಂಥ ವ್ಯವಸ್ಥೆ ಮಾಡಬೇಕೆಂಬ ಮನವಿಯನ್ನೂ ಸಹ ಲೋಕಸಭಾ ಸದಸ್ಯರ ಮುಖಾಂತರ ಅವರ ಮುಂದಿಟ್ಟಿದ್ದೇವೆ. ಈ ರೋಗದ ನಿಯಂತ್ರಣಕ್ಕೆ ನಮ್ಮ ರಾಜ್ಯ ಸರ್ಕಾರದವರು ಈಗಾಗಲೇ ಸುಮಾರು 2 ಕೋಟಿ 44 ಲಕ್ಷ ರೂಪಾಯಿಗಳನ್ನು ತ್ವರಿತ ಗತಿಯಲ್ಲಿ ಬಿಡುಗಡೆ ಮಾಡಿದ್ದು, ಇದರಲ್ಲಿ ಔಷಧಿಗಳನ್ನು ಸಹ ಈಗಾಗಲೇ ವಿತರಿಸುವಂಥ ವ್ಯವಸ್ಥೆಯನ್ನೂ ಮಾಡಿದ್ದಾರೆ. ಇಲಾಖೆಯಲ್ಲಿ ಸಿಬ್ಬಂದಿ ಕೊರತೆಯಿರುವ ಕಾರಣ ಸರಿಯಾದ ರೀತಿಯಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ತ್ವರಿತ ಗತಿಯಿಂದ ಅನುಷ್ಠಾನಗೊಳಿಸುವುದಕ್ಕೆ ಅನಾನುಕೂಲವಾಗುತ್ತಿರುವುದರಿಂದ ಸಂಬಂಧಪಟ್ಟ ಮಾನ್ಯ ಸಚಿವರನ್ನು ನಾನು ತಮ್ಮ ಮೂಲಕ ಒತ್ತಾಯಿಸುವುದೇನೆಂದರೆ, ಎಲ್ಲೆಲ್ಲಿ ಸಿಬ್ಬಂದಿಯ ಕೊರತೆ ಇದೆಯೋ ಅಲ್ಲಿಗೆ ಕೂಡಲೇ ಸಿಬ್ಬಂದಿಯನ್ನು ನಿಯೋಜಿಸುವಂಥ ವ್ಯವಸ್ಥೆ ಮಾಡಬೇಕು. ಅದರ ಜೊತೆಗೆ ನುಸಿರೋಗದಿಂದಾಗಿ ತೆಂಗು ಬೆಳೆಯ ಇಳುವರಿ ಈಗಾಗಲೇ ಕುಸಿದಿರುವುದಲ್ಲದೆ ಅದರ ಧಾರಣೆಯೂ ಸಹ ಕುಸಿದಿದೆ. ಇವೊತ್ತು ತಿಪಟೂರಿನ ತೆಂಗು ಮತ್ತು ಕೊಬ್ಬರಿ ಇಡೀ ರಾಷ್ಟ್ರಮಟ್ಟದಲ್ಲಿಯೇ ಹೆಸರುಗಳಿಸಿ ಪ್ರಖ್ಯಾತವಾಗಿರುವುದರಿಂದ ಇಂದು ತೆಂಗಿನ ಬೆಳೆಗೆ ಬಂದಿರುವ ರೋಗದಿಂದಾಗಿ ಇನ್ನು ಎರಡು ವರ್ಷಗಳ ಕಾಲ ತೆಂಗು ಬೆಳೆವ ರೈತರು ಅದರಿಂದ ಯಾವುದೇ ರೀತಿಯಾಗಿ ಪ್ರತಿಫಲ ಪಡೆಯಲು ಸಾಧ್ಯವಾಗುವುದಿಲ್ಲವೆಂಬುದನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಆದುದರಿಂದ, ಈಗಲಾದರೂ ಸರ್ಕಾರ ರೈತರ ನೆರವಿಗೆ ಧಾವಿಸಿ ಬಾರದಿದ್ದರೆ ತೆಂಗು ಬೆಳೆಯನ್ನೇ ಮುಖ್ಯವಾಗಿ ಅವಲಂಬಿಸಿರುವ ರೈತರ

ಪರಿಸ್ಥಿತಿಯಂತ್ತೂ ಶೋಚನೀಯ ಮಟ್ಟ ತಲುಪುತ್ತದೆ, ಅವರು ಬೀದಿಪಾಲಾಗುತ್ತಾರೆ. ಅದಕ್ಕೋಸ್ಕರ, ಅವರುಗಳಿಗೆ ಕೇಂದ್ರ ಸರ್ಕಾರ ಪರಿಹಾರ ಕೊಡುವಂಥ ವ್ಯವಸ್ಥೆ ಮಾಡುವುದಕ್ಕೆ ರಾಜ್ಯ ಸರ್ಕಾರ ಒತ್ತಾಯ ಮಾಡುವುದರ ಜೊತೆಗೆ ರಾಜ್ಯ ಸರ್ಕಾರದವರು ಸಹ ಪರಿಹಾರ ಕೊಡುವಂಥ ಕೆಲಸ ಮಾಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಮಾಡುತ್ತಿದ್ದೇನೆ.

ಇವೊತ್ತು ಸಬ್ಸಿಡಿ ದರದಲ್ಲಿ ಔಷಧಿಗಳನ್ನು ರೈತರುಗಳಿಗೆ ವಿತರಿಸಲಾಗುತ್ತಿದ್ದು, ನುಸಿರೋಗದ ಬಾಧೆಯಿಂದಾಗಿ ತೆಂಗಿನ ಮರದಲ್ಲಿ ಒಂದು ಕಾಯಿಯಾಗಲೀ, ಎಳನೀರಾಗಲೀ ಸಿಗುತ್ತಿಲ್ಲ. ಇವೊತ್ತು ಸಣ್ಣ ರೈತರಾದವರು ಸಬ್ಸಿಡಿ ದರದಲ್ಲಿ ವಿತರಿಸುವ ಔಷಧಿಯ ಶೇಕಡಾ 50ರಷ್ಟು ಹಣ ಭರಿಸುವುದಕ್ಕೂ ಬಹಳ ತೊಂದರೆಯಲ್ಲಿರುವುದರಿಂದ ಅವರಿಂದ ಯಾವುದೇ ರೀತಿಯಲ್ಲೂ ಹಣ ಪಡೆಯದೇ ದಯಮಾಡಿ ಅವರುಗಳಿಗೆ ಮುಫತ್ತಾಗಿ ಔಷಧಿಗಳನ್ನು ಒದಗಿಸಿಕೊಟ್ಟು ಮತ್ತು ದೊಡ್ಡ ರೈತರಿಗೆ ಸಬ್ಸಿಡಿ ದರದಲ್ಲಿ ಔಷಧಿಗಳನ್ನು ಒದಗಿಸಿಕೊಡುವಂಥ ವ್ಯವಸ್ಥೆ ಮಾಡಬೇಕೆಂದು ಸರ್ಕಾರಕ್ಕೆ ಒತ್ತಾಯಿಸುತ್ತಾ, ಸರ್ಕಾರ ಈಗ ಕೊಟ್ಟಿರುವ ಹಣ ಸಾಕಾಗುವುದಿಲ್ಲವಾದ್ದರಿಂದ ಇನ್ನು ಹೆಚ್ಚುವರಿಯಾಗಿ ಹತ್ತು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲು ಬಜೆಟ್‌ನಲ್ಲಿ ವ್ಯವಸ್ಥೆ ಮಾಡಿದಲ್ಲಿ ತೆಂಗು ಬೆಳೆ ಉಳಿಯುತ್ತದೆ. ಇಲ್ಲದಿದ್ದರೆ ನಾಡಿನಲ್ಲಿರುವ ತೆಂಗುಗಳೆಲ್ಲವೂ ನಾಶವಾಗುತ್ತವೆ, ತೆಂಗುಗಳು ನಾಶವಾದರೆ ಅದನ್ನು ಅವಲಂಬಿಸಿರುವ ರೈತರುಗಳು ಬೀದಿಪಾಲಾಗುತ್ತಾರಾದ್ದರಿಂದ ಅದಕ್ಕೆ ಅವಕಾಶ ಕೊಡಬಾರದೆಂದು ಸರ್ಕಾರವನ್ನು ಒತ್ತಾಯಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಸಿ.ಬಿ. ಸುರೇಶ್‌ಬಾಬು (ಚಿಕ್ಕನಾಯಕನಹಳ್ಳಿ) : ಮಾನ್ಯ ಅಧ್ಯಕ್ಷರೆ, ತೆಂಗು ಬೆಳೆಗೆ ತಗುಲಿರುವ ರೋಗದ ನಿಯಂತ್ರಣದ ಬಗ್ಗೆ ತಮ್ಮ ಮುಖಾಂತರ ಸರ್ಕಾರಕ್ಕೆ ನಾನು ಕೆಲವು ಸಲಹೆಗಳನ್ನು ಕೊಡಲಿಚ್ಚಿಸುತ್ತೇನೆ. ಈಗಾಗಲೇ ಮಾತನಾಡಿದ ಹಲವಾರು ಹಿರಿಯ (ಮಾನ್ಯ ಸದಸ್ಯರುಗಳು ವಿವಿಧ ರೀತಿಯ ಸಲಹೆಗಳನ್ನು ಕೊಟ್ಟಿದ್ದು, ನನ್ನ ಪಕ್ಕದ ತಿಪಟೂರು ಕ್ಷೇತ್ರದ ಶಾಸಕರಾದ ಷಡಕ್ಷರಿಯವರೂ ಸಹ ಮಾತನಾಡಿ ಸರ್ಕಾರಕ್ಕೆ ತಮ್ಮ ಸಲಹೆ ಕೊಟ್ಟಿದ್ದಾರೆ. ನನ್ನ ಕ್ಷೇತ್ರವಾದ ಚಿಕ್ಕನಾಯಕನಹಳ್ಳಿಯಲ್ಲಿ ಸುಮಾರು 90 ಭಾಗದಷ್ಟು ತೆಂಗಿನ ಫಸಲಿಗೆ ನುಸಿರೋಗ ಸೋಂಕಿರುವ ಪರಿಣಾಮವಾಗಿ ರೈತರೆಲ್ಲರೂ ಶೋಚನೀಯ ಪರಿಸ್ಥಿತಿಯಲ್ಲಿದ್ದಾರೆ. ರೋಗದ ನಿವಾರಣೆಗೆ ಶೇಕಡಾ 50ರಷ್ಟು ಸಬ್ಸಿಡಿ ದರದಲ್ಲಿ ಔಷಧಿಯನ್ನು ರೈತರುಗಳಿಗೆ ತಾವು ವಿತರಿಸುತ್ತಿದ್ದೀರಿ. ಈ ರೀತಿ ಔಷಧಿಗಳನ್ನು ತಾವು ವಿತರಿಸಿದಲ್ಲಿ ರೋಗ ನಿವಾರಣೆ ಮಾಡಲು ಸಾಧ್ಯವಾಗುವುದಿಲ್ಲ. ಇದರ ಬಗ್ಗೆ ನನ್ನದೊಂದು ಸಲಹೆಯೇನೆಂದರೆ, ಆರೋಗ್ಯ ಇಲಾಖೆ ಯಾವ ರೀತಿ ಪೋಲಿಯೋ ರೋಗವನ್ನು ನಿರ್ಮೂಲನ ಮಾಡುವ ಸಲುವಾಗಿ ಮಕ್ಕಳಿಗೆ ಪಲ್ಸ್ ಪೋಲಿಯೋ ಲಸಿಕೆ ಹಾಕುವ ಕಾರ್ಯಕ್ರಮವನ್ನು ಎಲ್ಲಾ ಕಡೆಗಳಲ್ಲೂ ಒಂದೇ ದಿವಸ ಹಮ್ಮಿಕೊಳ್ಳುತ್ತದೋ ಅದೇ ರೀತಿಯಲ್ಲಿ ತೆಂಗು ಬೆಳೆಗೆ ತಗುಲಿರುವ ನುಸಿರೋಗದ ನಿವಾರಣೆಗಾಗಿ ಒಂದು ದಿವಸದ ಕಾರ್ಯಕ್ರಮವನ್ನು ಇಲಾಖೆಯು ಎಲ್ಲಾ ಕಡೆಗಳಲ್ಲೂ ಹಮ್ಮಿಕೊಂಡು ಇದರಲ್ಲಿ ಇಲಾಖೆಯ ಎಲ್ಲಾ ಅಧಿಕಾರಿ, ನೌಕರ, ಸಿಬ್ಬಂದಿ ವರ್ಗದವರು ತೊಡಗಿಸಿಕೊಂಡು ತೆಂಗಿನ ಮರಗಳಿಗೆ ಔಷಧಿಯನ್ನು ಸಿಂಪಡಿಸಿದಲ್ಲಿ ಮಾತ್ರ ಈ ರೋಗವನ್ನು ನಿವಾರಿಸುವುದಕ್ಕೆ ಸಾಧ್ಯವಾಗುತ್ತದೆಂದು ನನ್ನ ಭಾವನೆ. ಆದುದರಿಂದ,

ದಯಮಾಡಿ ಸರ್ಕಾರ ಈ ರೀತಿ ಕಾರ್ಯಕ್ರಮವನ್ನು ತ್ವರಿತವಾಗಿ ಕೈಗೆತ್ತಿಕೊಂಡು ಮಾಡಬೇಕೆಂದು ಹೇಳುತ್ತೇನೆ. ಒಂದು ಭಾಗದಲ್ಲಿನ ರೈತರಿಗೆ ಔಷಧಿಯನ್ನು ವಿತರಿಸುತ್ತಿದ್ದರೆ, ಮತ್ತೊಂದು ಭಾಗದಲ್ಲಿರುವ ರೈತರು ದುಡ್ಡು ಕೊಟ್ಟು ಔಷಧಿಯನ್ನು ಪಡೆಯಲು ಸಾಧ್ಯವಾಗುತ್ತಿಲ್ಲ. ಆದಕಾರಣ, ಸರ್ಕಾರದವರೇ 'ಪಲ್ಸ್ ಪೋಲಿಯೋ' ಲಸಿಕೆ ಹಾಕುವ ರೀತಿಯಲ್ಲಿ ಒಂದೇ ದಿವಸದಂದು ಎಲ್ಲಾ ಕಡೆಗಳಲ್ಲೂ ಔಷಧಿಗಳನ್ನು ಸಿಂಪರಣೆ ಮಾಡುವಂಥ ಕಾರ್ಯಕ್ರಮ ಹಮ್ಮಿಕೊಂಡಲ್ಲಿ ರೋಗ ನಿವಾರಣೆ ಮಾಡಲು ಸಾಧ್ಯವಾಗುತ್ತದೆ ಮತ್ತು ರೈತರನ್ನು ಉಳಿಸುವುದಕ್ಕೆ ಸಾಧ್ಯವಾಗುತ್ತದೆಂದು ಭಾವಿಸುತ್ತಾ ಈ ಬಗ್ಗೆ ಸರ್ಕಾರದ ಗಮನ ಸೆಳೆಯುವುದಕ್ಕೆ ಇಷ್ಟಪಡುತ್ತೇನೆ. ಇಷ್ಟೇ ಅಲ್ಲದೆ, ತುಮಕೂರು ಜಿಲ್ಲೆಯಲ್ಲಿ ನನ್ನ ಕ್ಷೇತ್ರದಲ್ಲಿರುವ ತೋಟಗಾರಿಕಾ ಇಲಾಖಾಧಿಕಾರಿ ಅವರನ್ನು ಜಿಲ್ಲೆಯ ಅಧಿಕಾರಿಯಾಗಿ ನೇಮಿಸಿದ್ದರೂ ಯಾವಾಗ ಕೇಳಿದರೂ 'ನಾನು ತುಮಕೂರಿನಲ್ಲಿರುತ್ತೇನೆ' ಎಂದು ಸಬೂಬು ಹೇಳುತ್ತಾರೆ. ಇದರಿಂದ ಅವರನ್ನು ಕಾಣಲು ಬಂದಂಥ ರೈತರಿಗೆ ಅವರು ಸಿಗದೇ ಇರುವುದರಿಂದ ದಿಕ್ಕು ತೋಚದೇ ರೈತರುಗಳು ಕಂಗಾಲಾಗಿ ಹೋಗುತ್ತಿರುವುದರಿಂದ ದಯಮಾಡಿ ಎಲ್ಲಾ ಕ್ಷೇತ್ರಗಳಿಗೂ ಇಲಾಖಾಧಿಕಾರಿಗಳನ್ನು ನೇಮಿಸುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತಾ ಇಷ್ಟು ಹೊತ್ತು ಮಾತನಾಡಲು ನನಗೆ ಅವಕಾಶ ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) : ಮಾನ್ಯ ಅಧ್ಯಕ್ಷರೆ, ನಾನೂ ಕೂಡ ತೆಂಗು ಬೆಳೆಯುವ ಮೈಸೂರು ತಾಲ್ಲೂಕಿನ ಪ್ರದೇಶದಿಂದ ಬಂದಿರತಕ್ಕವನಾಗಿದ್ದು ಈ ಸದನಕ್ಕೆ ನಾನು ಶಾಸಕನಾಗಿ ಬರಬೇಕಾದರೆ ಈ ರಾಜ್ಯಕ್ಕೆ ನಮ್ಮ ಪ್ರದೇಶದ ತೆಂಗು ತನ್ನ ಕಾಣಿಕೆ ಸಲ್ಲಿಸಿದೆಯೆಂದು ಈ ಸಂದರ್ಭದಲ್ಲಿ ನೆನೆಯುತ್ತೇನೆ. ಇವೊತ್ತು ಮೈಸೂರು ತಾಲ್ಲೂಕಿನಲ್ಲಿ ಸುಮಾರು ಎರಡರಿಂದ ಮೂರು ಲಕ್ಷದಷ್ಟು ತೆಂಗಿನ ಮರಗಳಿವೆ. ತಿಪಟೂರಿನ ಕಡೆಯೂ ಹೆಚ್ಚಿನ ಸಂಖ್ಯೆಯಲ್ಲಿ ತೆಂಗಿನ ಮರಗಳಿರುವುದನ್ನು ನಾನು ಒಪ್ಪುತ್ತೇನೆ, ನಿಜ. ಆದರೆ, ನಮ್ಮಲ್ಲಿ ಬೇರಾವುದೇ ಬೆಳೆ ಬೆಳೆದರೆ ಲಾಭದಾಯಕವಾಗುವುದಿಲ್ಲವೆಂದು ತಿಳಿದು ಇವೊತ್ತು ಹೆಚ್ಚಿನ ರೀತಿಯಲ್ಲಿ ರೈತರುಗಳು ತೋಟಗಾರಿಕೆ ಬೆಳೆ ಬೆಳೆಯುವಂಥ ಪದ್ಧತಿಯನ್ನು ಅಳವಡಿಸಿಕೊಂಡಿದ್ದಾರೆ. ಅದರಲ್ಲೂ ನನ್ನ ಕ್ಷೇತ್ರವಾದ ಚಾಮುಂಡೇಶ್ವರಿಯಲ್ಲಿ ಸುಮಾರು 3-4ಲಕ್ಷದಷ್ಟು ತೆಂಗಿನ ಮರಗಳಿವೆ. ಮೈಸೂರು ತಾಲ್ಲೂಕಿನಲ್ಲಿ ಮೂರರರಿಂದ ನಾಲ್ಕು ಲಕ್ಷದಷ್ಟು ಸಂಖ್ಯೆಯಲ್ಲಿ ತೆಂಗಿನ ಮರಗಳಿದ್ದರೂ ಸಹ ಇಲಾಖೆಯವರು ವಿತರಿಸುತ್ತಿರುವ ಔಷಧಿಗಳು ಕೇವಲ ಒಂದು ಲಕ್ಷದಷ್ಟು ತೆಂಗಿನ ಮರಗಳಿಗೆ ಮಾತ್ರ ಉಪಯೋಗವಾಗುವಂತೆ ಕಾಣುತ್ತಿದೆ, ಅಥವಾ ಒಂದು ಲಕ್ಷದೊಳಗೆ ಆಗಬಹುದು. ಎಷ್ಟು ಜನ ರೋಗಿಗಳಿರುತ್ತಾರೋ ಅಷ್ಟೂ ಜನರನ್ನು ಗಮನದಲ್ಲಿಟ್ಟುಕೊಂಡು ಔಷಧಿಗಳನ್ನು ವಿತರಿಸಬೇಕಾಗುತ್ತದೆ. ಆದರೆ, ರೋಗಿಗೆ ಔಷಧಿ ಕೊಡಬೇಕಾಗಿದೆಯೆಂದು ಕೊಡುತ್ತಾರಷ್ಟೆ, ಯಾರಿಗೆ ಕೊಡುತ್ತಾರೆ? ನಾಲ್ಕು ಲಕ್ಷದಷ್ಟಿದ್ದರೆ ಒಂದು ಲಕ್ಷದಷ್ಟು ರೋಗಿಗಳಿಗೆ ಔಷಧಿ ಕೊಡುತ್ತಾರೆ. ಇನ್ನು ಉಳಿದಿರುವ ಮೂರು ಲಕ್ಷದಷ್ಟು ರೋಗಿಗಳು ಎಲ್ಲಿಗೆ ಹೋಗಬೇಕು? ಇಲಾಖೆಯಲ್ಲಿ ಯಾರ್ಯಾರು ಓಡಾಡುತ್ತಾರೆ, ಯಾವ ಇಲಾಖೆ ಜೊತೆ ಸಂಪರ್ಕ ಇಟ್ಟುಕೊಂಡಿದ್ದಾರೆ ಮತ್ತು ಯಾವ ಇಲಾಖೆಯಲ್ಲಿ ಇನ್‌ಫ್ಲುಯೆನ್ಸ್ ಇದೆಯೋ ಅವರಿಗೆ ಮಾತ್ರ ಔಷಧಿಗಳು ತಲುಪುತ್ತಿವೆಯೇ ಹೊರತು ನಿಜವಾಗಿಯೂ ಹಳ್ಳಿಯಲ್ಲಿರುವ

ಗೌಡನಿಗೆ ತಲುಪುತ್ತಿಲ್ಲ. ಇದು ಆಗಬಾರದು. ರಾಜ್ಯಾದ್ಯಂತ ಎಷ್ಟು ತೆಂಗಿನ ಮರಗಳಿಗೆ ನುಸಿರೋಗ ತಗುಲಿದೆ ಮತ್ತು ಅವು ಮತ್ತೆ ಆರೋಗ್ಯಕಾರಿಯಾಗಲು ಎಷ್ಟು ಪ್ರಮಾಣದಲ್ಲಿ ಔಷಧಿಯನ್ನು ಸಿಂಪಡಿಸಬೇಕೆಂಬುದರ ಬಗ್ಗೆ ಮೊದಲು ನಿರ್ಧಾರವಾಗಬೇಕು. ಇರುವ ನಾಲ್ಕು ಲಕ್ಷದಷ್ಟು ಮರಗಳಲ್ಲಿ ಕೇವಲ ಐವತ್ತು ಸಾವಿರ ಮರಗಳಿಗೆ ಔಷಧಿ ಸಿಂಪಡಿಸಲಾಗಿದೆಯೆಂದರೆ ನಿಜಕ್ಕೂ ರೈತರ ಹೊಟ್ಟೆ ಮೇಲೆ ಪ್ರಹಾರ ಮಾಡಿದಂತಾಗುತ್ತದೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಾನು ತಮ್ಮ ಗಮನಕ್ಕೆ ಒಂದು ವಿಚಾರ ತರುವುದೇನೆಂದರೆ, ಈ ಜಗತ್ತಿನದಾದ್ಯಂತ ಒಂದೇ ದಿವಸದಲ್ಲಿ ರೋಗ ಹಬ್ಬುವಂತಿದ್ದರೆ ನಾವು - ನೀವು ಯಾರೂ ಕೂಡ ಇಲ್ಲಿಗೆ ಬಂದು ಕೂರುವುದಕ್ಕಾಗುತ್ತಿರಲಿಲ್ಲ. ತೆಂಗು ಬೆಳೆಗೆ ಹಬ್ಬಿರುವ ಈ ನುಸಿರೋಗ ಒಂದೇ ದಿವಸದಲ್ಲಿ ಬಂದಿರುವುದಲ್ಲ, ಈ ಪೀಡೆ ಒಂದೇ ದಿವಸದಲ್ಲಿ ಬಂದಿರುವುದಿಲ್ಲ. ಸುಮಾರು ವರ್ಷಗಳ ಹಿಂದಿನಿಂದಲೂ ಈ ಪೀಡೆ ರಾಜ್ಯದ ಎಲ್ಲಾ ಉರುಗಳಿಗೂ ಹಬ್ಬಿರುವುದರಿಂದ what is the monitoring system these people have got? ಈ ರೋಗ ಶುರುವಾಯಿತಲ್ಲ, ಕಾಲರಾ ಒಂದೇ ದಿವಸ ಬರುವುದಿಲ್ಲ, ಪ್ಲೇಗ್ ಒಂದೇ ದಿವಸ ಬರುವುದಿಲ್ಲ, ಅದೇ ರೀತಿ ನುಸಿರೋಗವು ಒಂದೇ ದಿವಸ ಬಂದಿರುವುದಿಲ್ಲ. ಈ ನುಸಿರೋಗ ತೆಂಗು ಬೆಳೆಗೆ ಬರುವ ಮುನ್ನ ನಿಮ್ಮ ಇಲಾಖೆಯವರು ಯಾವ ರೀತಿಯಾದ ಮಾನಿಟರಿಂಗ್ ಸಿಸ್ಟಂ ಮಾಡಿದ್ದಾರೆ? ಮತ್ತು ಏನೇನು ಪ್ರಿವೆಂಟಿವ್ ಸೈಪ್ಸ್ ತೆಗೆದುಕೊಂಡಿದ್ದಾರೆ? ಎಂಬ ಬಗ್ಗೆ ನನ್ನದೇ ಆದಂಥ ಸಂಶಯಗಳನ್ನು ಇಟ್ಟುಕೊಂಡಿದ್ದೇನೆ. ಇಲ್ಲಿ ಸಿಸ್ಟಂ ಬಹಳ ದುರ್ಬಲವಾಗಿದೆ. ಕಾಯಿದೆ ಬಂದ ನಂತರ ಮೆಡಿಸಿನ್ ತರುವುದಕ್ಕೆ ಹೋಗುವುದು, ಡಾಕ್ಟರನ್ನು ಕರೆದುಕೊಂಡು ಬರುವುದು ಮತ್ತು ಹೊಟ್ಟೆ ಕುಯ್ಯಬೇಕೆಂದರೆ ಸರ್ಜನ್ ಅವರನ್ನು ಕರೆದುಕೊಂಡು ಬರುವುದು, this is not the method of treating the affected people. ಆದುದರಿಂದ, ದಯಮಾಡಿ ಈಗಲಾದರೂ ಕೂಡ ಮಾನ್ಯ ಸಚಿವರು ಇದರ ಬಗ್ಗೆ ಗಮನಹರಿಸಬೇಕು. ಇಂತಹ ಕಾಯಿಲೆ ಒಂದೇ ದಿವಸದಲ್ಲಿ ಬರುವುದಿಲ್ಲ, ಈ ಕಾಯಿಲೆ ಬರುವ ಮುನ್ನ ತಾವು ಏನೇನು ಕ್ರಮಗಳನ್ನು ತೆಗೆದುಕೊಂಡಿದ್ದೀರೆಂಬುದನ್ನು ದಯಮಾಡಿ ಈ ಸದನಕ್ಕೆ ತಿಳಿಸಬೇಕೆಂದು ನಾನು ಈ ಸಂದರ್ಭದಲ್ಲಿ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ತೆಂಗು ಬೆಳೆಗೆ ನುಸಿರೋಗ ಬಂದಿದೆಯೆಂದು ತಾವು ಏನು ಹೇಳುತ್ತಿದ್ದೀರಿ, ಇಲ್ಲೊಂದು ಗಹನವಾದ ಪ್ರಶ್ನೆ ಅಡಕವಾಗಿದೆ. ಏನೆಂದರೆ, ತೆಂಗು ಬೆಳೆಗೆ ಸಂಬಂಧಿಸಿದಂತೆ ರಾಷ್ಟ್ರಮಟ್ಟದಲ್ಲಿ ಕೆಲವು ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ. ಉದಾಹರಣೆಗೆ, ಸಿ.ಪಿ.ಸಿ.ಆರ್.ಐ (ಸೆಂಟ್ರಲ್ ಪ್ಲಾಂಟೇಶನ್ ಕ್ರಾಪ್ ರೀಸರ್ಚ್ ಇನ್ಸ್‌ಟಿಟ್ಯೂಟ್) ಕಾಸರಗೋಡು ಈ ಸಂಸ್ಥೆಯ ಅಧಿಕಾರಿಗಳು ತೆಂಗು, ಅಡಿಕೆ ಮುಂತಾದ ಪ್ಲಾಂಟೇಶನ್ ಕ್ರಾಪ್‌ಗೆ ಸಂಬಂಧಿಸಿದಂತೆ ಯಾವ್ಯಾವ ರೋಗಗಳು ಬರುತ್ತವೆ, ರೋಗಗಳು ಬಂದಲ್ಲಿ ಮುಂಜಾಗ್ರತೆ ಕ್ರಮಗಳನ್ನು ಯಾವ ರೀತಿ ಕೈಗೊಳ್ಳಬೇಕು ಎಂಬ ಬಗ್ಗೆ ಆಗಿಂದಾಗ್ಗೆ ಜಿಲ್ಲೆಗಳಲ್ಲಿ ಪ್ರವಾಸ ಮಾಡುತ್ತಾ ಅಗತ್ಯ ಮಾಹಿತಿ, ಸೂಚನೆಗಳನ್ನು ಕೊಡುತ್ತಿರುತ್ತಾರೆ. ಇವರೂ ಕೂಡ ನುಸಿರೋಗ ತಡೆಗಟ್ಟುವ ಬಗ್ಗೆ ಮಾನಿಟರಿಂಗ್ ಮಾಡಿದ್ದಾರೆಯೇ? ಇಲ್ಲವೇ? ಮಾನಿಟರಿಂಗ್ ಮಾಡಿದ್ದ ಪಕ್ಷದಲ್ಲಿ ಇವರೇಕೆ ಕ್ರಮಗಳನ್ನು ತೆಗೆದುಕೊಂಡಿಲ್ಲ? ಇಷ್ಟು ಭಯಂಕರ

ರೂಪದಲ್ಲಿ ನುಸಿರೋಗ ಎಲ್ಲಾ ಊರುಗಳಿಗೂ ಏಕಾಏಕಿ ಹಬ್ಬಿದಾಗ ಇಲಾಖೆಯವರು ಏನು ಮಾಡುತ್ತಿದ್ದರು ಎಂಬ ಅಂಶಗಳನ್ನೆಲ್ಲಾ ತಾವು ಮನಸ್ಸಿನಲ್ಲಿಟ್ಟುಕೊಂಡು ಇದಕ್ಕೆಲ್ಲಾ ಉತ್ತರ ಹೇಳಬೇಕಾಗುತ್ತದೆ. ಈ ನುಸಿ ರೋಗ ಭಾರತ ದೇಶದಲ್ಲಿ ಮಾತ್ರ ಬಂದಿಲ್ಲ. ಬೇಕಾದಷ್ಟು ಇತರೆ ರಾಷ್ಟ್ರಗಳಲ್ಲೂ ಸಹ ಇದು ಬಂದಿದೆ. ತೆಂಗನ್ನು ಹೆಚ್ಚಾಗಿ ಬೆಳೆಯುವಂಥ ದೇಶಗಳು ಇವೆ. ಮಲೇಷಿಯ, ಫಿಲಿಫೈನ್ಸ್ ಸಿಲೋನ್ ಇಲ್ಲಿ ನೂರಕ್ಕೆ ತೊಂಬತ್ತರಷ್ಟು ತೆಂಗಿನ ಬೆಳೆಯನ್ನು ಬೆಳೆಯುತ್ತಾರೆ. ಇಡೀ ಜಗತ್ತಿಗೆ ಪೂರ್ತಿಯಾಗಿ ತೆಂಗಿನ ಎಣ್ಣೆಯನ್ನು ಒದಗಿಸುವಂಥವರು. ಜಗತ್ತಿಗೆ ಪೂರ್ತಿಯಾಗಿ ತೆಂಗಿನ ಉತ್ಪನ್ನಗಳನ್ನು ಕೊಡತಕ್ಕವರು ಅವರು. ಅವರುಗಳು ಈ ರೋಗದ ಬಗ್ಗೆ ಏನು ಮಾಡಿದ್ದಾರೆ ಎಂಬ ಬಗ್ಗೆ ನಮ್ಮ ಇಲಾಖೆಯವರು ಪ್ರಸ್ತಾಪವನ್ನು ಇದುವರೆಗೆ ಮಾಡಿಲ್ಲ. ಆ ದೇಶಗಳಲ್ಲಿ ಈ ರೋಗವನ್ನು ತಡೆಗಟ್ಟಲು ಮುಂಜಾಗರೂಕತೆಯಾಗಿ ಯಾವ್ಯಾವ ಕ್ರಮವನ್ನು ತೆಗೆದುಕೊಂಡಿದ್ದಾರೆ ಎಂಬ ಬಗ್ಗೆ ಪತ್ರಿಕೆಗಳಲ್ಲಿ ನಾನು ಓದಿದ್ದೇನಷ್ಟೆ. ತಮ್ಮ ಅಧಿಕಾರಿಗಳನ್ನು ಆ ದೇಶಗಳಿಗೆ ಕಳಿಸಿ ಅಲ್ಲಿಂದ ಪರಿಣಿತರನ್ನು ಇಲ್ಲಿಗೆ ಕರೆಸಿ ದಯಮಾಡಿ ಇದರ ಬಗ್ಗೆ ಪರೀಕ್ಷೆ ನಡೆಸಿ. ಆ ದೇಶಗಳಲ್ಲಿಯೂ ತೊಂಬತ್ತರಷ್ಟು ಜನರ ಜೀವನ ತೆಂಗಿನ ಬೆಳೆಯಿಂದಲೇ ನಡೆಯುವುದು. ನಮ್ಮ ರೀತಿ ಸಣ್ಣ ಪ್ರಮಾಣದಲ್ಲಿ ತೆಂಗಿನ ಬೆಳೆಯನ್ನು ಬೆಳೆಯುವ ರೈತರು ಅವರು. ತೆಂಗಿನ ಬೆಳೆಯನ್ನು ಸಿಂಗಲ್ ಬೆಳೆಯಾಗಿ ಬೆಳೆಯುವಂಥ ದೇಶಗಳು ಅವು. ಇಂಥ ದೇಶಗಳಲ್ಲಿ ಈಗಾಗಲೇ ಪರಿಣಾಮಕಾರಿಯಾಗಿ ತೆಗೆದುಕೊಂಡಿರುವ ಕಾರ್ಯಕ್ರಮಗಳ ಬಗ್ಗೆ ದಯಮಾಡಿ ಮಾನ್ಯ ಸಚಿವರು ತಿಳಿಸಬೇಕು. ಗರಿ ತಿನ್ನುವಂಥ ಹುಳುಗಳ ರೋಗ ತೆಂಗಿನ ಬೆಳೆಗೆ ಬರುತ್ತಿತ್ತು. ಆ ರೋಗಕ್ಕೆ ಏನು ಔಷಧಿಯನ್ನು ಕೊಡುತ್ತಿದ್ದರೋ ಅದನ್ನೇ ನುಸಿ ರೋಗಕ್ಕೂ ಕೊಡುತ್ತಿದ್ದಾರೆ. ಆ ರೋಗಕ್ಕೆ ಮಾನೋಕ್ರೋಟಾಫಾಸ್ ಔಷಧಿಯನ್ನೇ ಕೊಡುತ್ತಿದ್ದರು, ಈ ನುಸಿ ರೋಗಕ್ಕೆ ಸಹ ಅದನ್ನೇ ಕೊಡುತ್ತಿದ್ದಾರೆ. ಅದರ ಜೊತೆಗೆ ನೋಸಾಫಾಲ್ ಎಂಬ ಔಷಧಿಯನ್ನು ಕೊಡುತ್ತಿದ್ದಾರೆ. ಇದಲ್ಲದೆ ಬೇಕಾದಷ್ಟು ಮೆಡಿಸಿನ್ಸ್ ಇವೆ. ಒಂದೇ ರೋಗಕ್ಕೆ ಹತ್ತಾರು ಔಷಧಿಗಳನ್ನು ಔಷಧಿಯ ಅಂಗಡಿಗಳಲ್ಲಿ ಕೊಡುತ್ತಾರೆ. ಆದರೆ ಸರ್ಕಾರದವರು ಎರಡು ಔಷಧಿಗಳನ್ನು ಬಿಟ್ಟು ಮೂರನೆಯ ಔಷಧಿಯನ್ನು ಒದಗಿಸಲು ಸಿದ್ಧರಾಗಿಲ್ಲ. it means that their research is poor. It means that their method of application is very poor. ಈ ದಿಕ್ಕಿನಲ್ಲಿ ಇಲಾಖೆಯವರು ಎಚ್ಚರಿಕೆಯನ್ನು ವಹಿಸದಿದ್ದರೆ ತೆಂಗಿನ ಬೆಳೆ ನಾಶವಾಗುತ್ತದೆ. ಲಕ್ಷಾಂತರ ಜನರ ಜೀವನ ಮುಗಿದು ಹೋಗುತ್ತದೆ. ನಮ್ಮ ಭಾಗದಲ್ಲಂತೂ ತೆಂಗಿನ ಬೆಳೆ ಬಿಟ್ಟರೆ ಬೇರೆ ದಾರಿಯೇ ಇಲ್ಲ. ಮೈಸೂರು ಭಾಗದ ಸುತ್ತಮುತ್ತ ವ್ಯವಸಾಯವನ್ನು ಮಾಡಲು ಯಾರಿಗೂ ಸಾಧ್ಯವಾಗುತ್ತಿಲ್ಲ. ಕೂಲಿಯವರು ಬರುವುದಿಲ್ಲ, ಮಳೆಯಾಗುವುದಿಲ್ಲ, ಬೋರ್‌ವೆಲ್‌ನಲ್ಲಿ ನೀರು ಇಲ್ಲ. ಬೇರೆ ಯಾವ ಬೆಳೆಯೂ ನಾವು ಬೆಳೆದಂತಹ ಬೆಳೆಗೆ ಮಾರಾಟದ ಬೆಲೆಗೂ ಸಂಬಂಧವೇ ಇಲ್ಲ. ತೆಂಗಿನ ಬೆಳೆಯಿಂದ ಮಾತ್ರ ನಾವುಗಳು ಸ್ವಲ್ಪ ಉಸಿರಾಟ ಮಾಡಲು ಸಾಧ್ಯವಾಗಿದೆ. ನಮ್ಮ ಜೀವನೋಪಾಯವನ್ನು ತಪ್ಪಿಸದ ರೀತಿಯಲ್ಲಿ ಈ ರೋಗವನ್ನು ತಪ್ಪಿಸಲು ಕ್ರಮವನ್ನು ಸರ್ಕಾರ ತೆಗೆದುಕೊಳ್ಳಬೇಕಾಗಿದೆ. ಅಂತರಾಷ್ಟ್ರೀಯ ಮಟ್ಟದಲ್ಲಿ ಇದನ್ನು ಕಾಂಟ್ರಾಡಿಕ್ಟ್ ಮಾಡುವುದಕ್ಕೆ ಬೇಕಾದಷ್ಟು ಔಷಧಿಗಳನ್ನು ಕಂಡು ಹಿಡಿದಿದ್ದಾರೆ. ಕೇವಲ ಎರಡೇ

ಔಷಧಿಗಳು ಮಾತ್ರ ಇಲ್ಲ. ಎರಡೇ ಔಷಧಿಗಳು ಎಂದರೆ ಏನೇನು ಪ್ರಯೋಜನವಾಗುವುದಿಲ್ಲ. ಆದ್ದರಿಂದ ಈ ದೃಷ್ಟಿಯಿಂದ ಹೆಚ್ಚಿನ ರೀತಿಯಲ್ಲಿ ಕಾರ್ಯಕ್ರಮವನ್ನು ಹಾಕಿಕೊಡು ನುಸಿರೋಗವೆಂಬ ಪೀಡೆ ಏನು ಬಂದಿದೆ ಅದನ್ನು ಎಲ್ಲಾ ಊರುಗಳಿಂದ ಹೊರಕ್ಕೆ ಕಳಿಸಲು ಶಕ್ತಿಯುತವಾಗಿ ಕೆಲಸ ಮಾಡಬೇಕು ಎಂದು ಮನವಿ ಮಾಡಿಕೊಳ್ಳುತ್ತಾ, ನಾನು ಕೊನೆಯ ಸಾಲಿನಲ್ಲಿ ಕುಳಿತಿರುವವನು, ವಿರೋಧ ಪಕ್ಷದವರು ಇಲ್ಲ ಎಂದು ನನಗೆ ಮಾತನಾಡಲು ಅವಕಾಶವನ್ನು ಕೊಟ್ಟುಬಿಟ್ಟಿದ್ದೀರಿ, ಅವರುಗಳು ಇಲ್ಲದಿದ್ದಾಗ ನನಗೆ ಮಾತನಾಡಲು ಅವಕಾಶವೊಂದನ್ನು ಕೊಟ್ಟಿದ್ದಕ್ಕೆ ತಮಗೆ ವಂದಿಸಿ ಇಲಾಖೆಯವರು ಈ ರೋಗದ ತಡೆಗಟ್ಟುವಿಕೆಯಲ್ಲಿ ಮುನ್ನುಗ್ಗುತ್ತಾರೆಂದು ನಂಬಿ ನನ್ನ ಮಾತನ್ನು ಮುಗಿಸುತ್ತೇನೆ, ವಂದನೆಗಳು.

+ಶ್ರೀ ಹೆಚ್. ಗೋಪಾಲ ಭಂಡಾರಿ (ಕಾರ್ಕಳ) : ಮಾನ್ಯ ಅಧ್ಯಕ್ಷರೆ, ಈ ನುಸಿ ರೋಗದ ಬಗ್ಗೆ ಸಾಕಷ್ಟು ವಿಚಾರವನ್ನು ಮಾನ್ಯ ಸದಸ್ಯ ಮಿತ್ರರು ಹೇಳಿದ್ದಾರೆ. ವಿಶೇಷವಾಗಿ ಕರಾವಳಿ ಜಿಲ್ಲೆ ತೆಂಗನ್ನು ಹೆಚ್ಚಾಗಿ ಬೆಳೆಯುವ ಪ್ರದೇಶವಾಗಿದೆ. ನಮ್ಮಲ್ಲಿ ಭತ್ತದ ಬೆಳೆಗೆ ಅವಕಾಶ ಸ್ವಲ್ಪ ಕಡಿಮೆ ಇರುವುದರಿಂದ ಇತ್ತೀಚೆಗೆ ನಮ್ಮ ರೈತರು ತೆಂಗು ಬೆಳೆಗೆ ತಮ್ಮ ಬೆಳೆಯನ್ನು ಬದಲಾಯಿಸಿಕೊಂಡಿರುವ ಈ ಸಂದರ್ಭದಲ್ಲಿ ನಮ್ಮ ಭಾಗದಲ್ಲಿ ನುಸಿ ರೋಗದಂತೆ ಮತ್ತೊಂದು ವಿಶಿಷ್ಟವಾದ ಹಳದಿ ರೋಗವೆಂದು ಬಂದಿದೆ. ಹಳದಿ ರೋಗ ಬಂದರೆ ಆ ತೆಂಗಿನ ಮರಗಳೇ ಎರಡು ಮೂರು ವರ್ಷಗಳಲ್ಲಿ ಸಾಯತಕ್ಕ ಪರಿಸ್ಥಿತಿಯಾಗಿ ಇಡೀ ತೋಟವೇ ನಾಶವಾಗಿದೆ. ಕೆಲವು ರೈತರು ತೋಟದ ಎಲ್ಲಾ ಮರಗಳನ್ನು ಕಡಿದು ಬೇರೆ ಮರಗಳನ್ನು ನೆಡುವ ವ್ಯವಸ್ಥೆಯಾಗಿದೆ. ಎರಡು ಮೂರು ವರ್ಷಗಳ ಹಿಂದೆ ಅಡಿಕೆಗೆ ಇರುವೆ ಕಾಟದ ರೋಗ ಬಂದಿತ್ತು. ಅದು ಈಗ ಸಂಪೂರ್ಣವಾಗಿ ಹತೋಟಿಗೆ ಬಂದಿದೆ. ವಿಶೇಷವಾಗಿ ಸುಳ್ಯ, ಪುತ್ತೂರಿನಲ್ಲಿ ಸಂಪೂರ್ಣವಾಗಿ ತೋಟಗಳೆ ಈ ಹಳದಿ ರೋಗದಿಂದ ನಾಶವಾಗಿವೆ. ನಮ್ಮ ಜಿಲ್ಲೆಯಲ್ಲಿ ತೆಂಗು ವಿಶೇಷವಾಗಿರುವ ಬೆಳೆಯಾಗಿದೆ. ಕರಾವಳಿ ಜಿಲ್ಲೆಯಲ್ಲಿ ತೆಂಗಿನ ಬೆಳೆ ಜಾಸ್ತಿಯಾಗಿರುತ್ತದೆ. ನುಸಿ ಪೀಡೆಯಂಥ ರೋಗದಂತೆಯೇ ಈ ಹಳದಿ ರೋಗವು ಸಹ ಆಗಿದೆ. ಆದ್ದರಿಂದ ಈ ಹಳದಿ ರೋಗಕ್ಕೆ ಸಹ ಏನಾದರೂ ಪರಿಹಾರವನ್ನು ಕೊಡಬೇಕು. ಇಲ್ಲದಿದ್ದರೆ ಅಲ್ಲಿರುವ ರೈತರ ಪರಿಸ್ಥಿತಿ ಚಿಂತಾಜನಕವಾಗುತ್ತದೆ. ಈಗಾಗಲೇ ಅವರ ಪರಿಸ್ಥಿತಿ ಚಿಂತಾಜನಕವಾಗಿದೆ. ಆದ್ದರಿಂದ ಇದರ ಬಗ್ಗೆ ಸರ್ಕಾರ ಏನಾದರೂ ವ್ಯವಸ್ಥೆ ಮಾಡಬೇಕು ಎಂದು ಈ ವಿಚಾರವನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

+ಶ್ರೀ ಡಿ.ಸಿ. ತಮ್ಮಣ್ಣ (ಕಿರುಗಾವಲು) : ಮಾನ್ಯ ಅಧ್ಯಕ್ಷರೆ, ಈಗಾಗಲೆ ಸಾಕಷ್ಟು ಹಿರಿಯ ಸದಸ್ಯರು ತೆಂಗಿನ ಬೆಳೆಗೆ ಬರುವ ನುಸಿ ರೋಗದ ಬಗ್ಗೆ ಸದನದ ಗಮನವನ್ನು ಸೆಳೆದಿದ್ದಾರೆ. ನಾನು ಮಂಡ್ಯ ಜಿಲ್ಲೆಯಿಂದ ಬಂದವನಾಗಿದ್ದು ನನ್ನ ಕ್ಷೇತ್ರದಲ್ಲಿ 5 ಲಕ್ಷದ 70 ಸಾವಿರ ತೆಂಗಿನ ಮರಗಳು ಇವೆ. ಅದರಲ್ಲಿ ಕೃಷಿ ಇಲಾಖೆಯವರು ಕೊಟ್ಟಿರುವ ಮಾಹಿತಿಯ ಪ್ರಕಾರ 3 ಲಕ್ಷದ 30 ಸಾವಿರ ಮರಗಳಿಗೆ ಈಗಾಗಲೇ ನುಸಿ ರೋಗ ತಗುಲಿದೆ. ಈ ನುಸಿ ರೋಗವು ಕಾಲರಾ ಮತ್ತು ಪ್ಲೇಗ್ ನಂತೆ ದೊಡ್ಡ ಪೀಡೆಯಾಗಿರುತ್ತದೆ. ಪಕ್ಕದ ಮನೆಯವರಿಗೆ ಕಾಲರಾ ಬಂದಿದೆ, ನನಗೆ ಏನು ಆಗುವುದಿಲ್ಲವೆಂದು ಸುಮ್ಮನೆ ಕುಳಿತುಕೊಂಡರೆ ಆಗುವುದಿಲ್ಲ. ಹಣವಿದ್ದವರು ಔಷಧಿಯನ್ನು ತಂದು

ಸಿಂಪರಣೆ ಮಾಡಿ, ಹಣವಿಲ್ಲದವರು ಸಿಂಪರಣೆ ಮಾಡದಿದ್ದರೆ ಸಿಂಪರಣೆ ಮಾಡಿದವರ ಮರಕ್ಕೂ ರೋಗ ಹರಡುತ್ತದೆ. ಆದ್ದರಿಂದ ಈ ಬಗ್ಗೆ ನನ್ನ ಸಲಹೆ ಏನೆಂದರೆ, ಸರ್ಕಾರದ ಅಂದಾಜಿನ ಪ್ರಕಾರ ಒಂದು ಮರಕ್ಕೆ ಔಷಧಿಯನ್ನು ಸಿಂಪರಣೆ ಮಾಡಲು ಹತ್ತು ರೂಪಾಯಿಗಳಾದರೂ ಬೇಕು. ಬಡವರು ಅವರ ತೋಟದಲ್ಲಿ ಔಷಧಿಯನ್ನು ಸಿಂಪರಣೆ ಮಾಡಲು ಸಾಧ್ಯವಾಗುವುದಿಲ್ಲ. ಆ ರೀತಿ ಬಡವರು ಔಷಧಿಯನ್ನು ಸಿಂಪರಣೆ ಮಾಡಲು ಸಾಧ್ಯವಾಗದೆ ನೆಗ್ಲೆಕ್ಟ್ ಮಾಡಿದಂಥ ಸಂದರ್ಭದಲ್ಲಿ ಔಷಧಿಯನ್ನು ಸಿಂಪರಣೆ ಮಾಡಿದಂಥ ರೈತರ ತೋಟಗಳಿಗೂ ಪುನಃ ರೋಗ ಹರಡುವಂಥ ಪ್ರಮೇಯ ಇರುತ್ತದೆ. ಆದ್ದರಿಂದ ಸರ್ಕಾರ ಈ ಕಾರ್ಯಕ್ರಮವನ್ನು ಸರ್ಕಾರಿ ಕಾರ್ಯಕ್ರಮವೆಂದು ತೆಗೆದುಕೊಂಡು ತ್ವರಿತಗತಿಯಿಂದ ಕೆಲಸ ಮಾಡಿದರೆ ತೆಂಗಿನ ಮರಗಳಿಗೆ ಬಂದಿರುವ ಈ ನುಸಿ ರೋಗವನ್ನು ತಪ್ಪಿಸಲು ಸಾಧ್ಯವಾಗುತ್ತದೆ ಎಂದು ನನ್ನ ಅಭಿಪ್ರಾಯ. ಮಂಡ್ಯ ಜಿಲ್ಲೆಯಲ್ಲಿ 33 ಲಕ್ಷ ತೆಂಗಿನ ಮರಗಳು ಇದೆ. ಒಂದು ಮರಕ್ಕೆ ಹತ್ತು ರೂಪಾಯಿಗಳಂತೆ ಲೆಕ್ಕ ಮಾಡಿದರೂ ಸಹ ಒಟ್ಟು 3 ಕೋಟಿ 30 ಲಕ್ಷ ಬೇಕಾಗುತ್ತದೆ. ಆದರೆ ಸರ್ಕಾರ ಇಂದು ನಮ್ಮ ಜಿಲ್ಲೆಗೆ ಬಿಡುಗಡೆ ಮಾಡಿರುವುದು ಕೇವಲ 30 ಲಕ್ಷ ಮಾತ್ರ. 3 ಕೋಟಿ 30 ಲಕ್ಷ ಬೇಕಾಗಿರುವುದಕ್ಕೆ 30 ಲಕ್ಷ ಹಣದಿಂದ ಏನು ಕಾರ್ಯ ಮಾಡಲು ಸಾಧ್ಯವಾಗುತ್ತದೆ? ಇದರಿಂದ ಈ ರೋಗವನ್ನು ಪೂರ್ಣವಾಗಿ ತಡೆಗಟ್ಟಲು ಸಾಧ್ಯವಾಗುತ್ತದೆಯೇ ಇಲ್ಲವೇ ಎಂಬ ಬಗ್ಗೆ ಮಾನ್ಯ ಕೃಷಿ ಸಚಿವರು ಚಿಂತನೆ ಮಾಡಬೇಕಾಗುತ್ತದೆ. ಆದ್ದರಿಂದ ಸರ್ಕಾರ ಇದನ್ನು ಸರ್ಕಾರಿ ಕಾರ್ಯಕ್ರಮವೆಂದು ತೆಗೆದುಕೊಂಡು ಪ್ರತಿಯೊಂದು ತೋಟಗಳಿಗೂ ಪ್ರತಿಯೊಂದು ತೆಂಗಿನ ಮರಕ್ಕೂ ಈ ಔಷಧಿಯನ್ನು ಸಿಂಪರಣೆ ಮಾಡದಿದ್ದರೆ ಈ ರೋಗವನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಸಾಧ್ಯವಾಗುವುದಿಲ್ಲ. ಈ ಸದನದಲ್ಲಿ ಈ ಹಿಂದೆ ಕೃಷಿ ಸಚಿವರಾಗಿದ್ದಂಥ ಮಾನ್ಯ ಬೈರೇಗೌಡರು ಈ ವಿಚಾರದಲ್ಲಿ ಗಮನ ಸೆಳೆಯುವ ಸೂಚನೆಯನ್ನಾಗಿ ತಂದಿದ್ದಾರೆ. ಈ ರೋಗ ಕಳೆದ ಎರಡು ವರ್ಷಗಳಿಂದ ಬಂದಿದೆಯೆಂದು ಎಲ್ಲಾ ಸದಸ್ಯರು ಹೇಳಿದ್ದಾರೆ. ಆದರೆ ಹಿಂದಿನ ಸರ್ಕಾರದಲ್ಲಿ ಏನು ಮಾಡುತ್ತಿದ್ದರು ಎಂಬ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲಾದರೂ ಈ ದಿಸೆಯಲ್ಲಿ ಕೆಲವಾರು ಕಾರ್ಯಕ್ರಮವನ್ನು ಹಮ್ಮಿಕೊಂಡು ಈ ರೋಗಕ್ಕೆ ಕಾರಣಗಳೇನು? ಇದರ ನಿವಾರಣೆಗೆ ಯಾವ ಔಷಧಿಯನ್ನು ಕೊಡಬೇಕು ಎಂದು ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಇದು ನಿಜವಾಗಿಯೂ ಸ್ವಾಗತಾರ್ಹವಾದ ವಿಚಾರವಾಗಿದೆ. ಈ ನುಸಿ ಪೀಡೆ ರೋಗ ಮತ್ತು ಏಡ್ಸ್ ರೋಗ ಇವೆರಡೂ 1995-98ರ ಅವಧಿಯಲ್ಲಿ ಹಿಂದಿನ ಸರ್ಕಾರವಿದ್ದಾಗ ಬಂದಿರತಕ್ಕದ್ದು. ಈ ಪಿಡುಗನ್ನು ನಿವಾರಣೆ ಮಾಡಲು ನಮ್ಮ ಸರ್ಕಾರ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಆದ್ದರಿಂದ ತೋಟಗಾರಿಕಾ ಸಚಿವರು ಇದನ್ನು ವೈಯಕ್ತಿಕ ಕಾರ್ಯಕ್ರಮವೆಂದು ತಿಳಿದುಕೊಳ್ಳದೆ ಸರ್ಕಾರಿ ಕಾರ್ಯಕ್ರಮವೆಂದು ತಿಳಿದು ನುಸಿ ರೋಗವನ್ನು ತಡೆಗಟ್ಟಲು ಕ್ರಮಗಳನ್ನು ತೆಗೆದುಕೊಳ್ಳಬೇಕು. ಆಗ ಮಾತ್ರ ಈ ರೋಗವನ್ನು ಸಂಪೂರ್ಣವಾಗಿ ತಡೆಗಟ್ಟಲು ಸಾಧ್ಯವಾಗುತ್ತದೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಮಾನ್ಯ ಸದಸ್ಯರುಗಳು ಏನು ಹೇಳಿದ್ದಾರೆ ಅದಕ್ಕೆ ನಾನೂ ಸಹ ಧ್ವನಿಗೂಡಿಸುತ್ತೇನೆ. ನನ್ನ ಐದು ಎಕರೆ ಪ್ರದೇಶದಲ್ಲಿನ ತೆಂಗಿನ ಬೆಳೆಗೆ ನುಸಿ ರೋಗ ಬಂದಿರುತ್ತದೆ. ಕೋಲಾರ ಜಿಲ್ಲೆಗೆ

ಸಂಬಂಧಪಟ್ಟ ಅಧಿಕಾರಿಗೆ ದೂರವಾಣಿ ಮಾಡಿ ಕೇಳಿದರೆ ಗ್ರಾಂಟ್ ಇಲ್ಲ ಎಂದು ಹೇಳುತ್ತಾರೆ. ಸ್ವಲ್ಪ ದಿವಸ ಬಿಟ್ಟು ಮತ್ತೆ ದೂರವಾಣಿ ಮಾಡಿದರೆ ಔಷಧಿ ಬಂದಿಲ್ಲವೆಂದು ಹೇಳುತ್ತಾರೆ. ನಂತರ ಸ್ವಲ್ಪ ಜೋರಾಗಿ ನಾನು ಮಾತನಾಡಿದ ಮೇಲೆ ಕ್ರಮ ತೆಗೆದುಕೊಂಡರು. ನನಗೆ ಸುಮಾರು ಹತ್ತು ಹದಿನೈದು ದಿವಸಗಳು ಆಯಿತು. ಸರ್ಕಾರದವರು ಈ ಕಾರ್ಯಕ್ರಮವನ್ನು ಯುದ್ಧೋಪಾದಿಯಲ್ಲಿ ತೆಗೆದುಕೊಳ್ಳಬೇಕು. ಭೂಕಂಪವಾದರೆ ಪರಿಹಾರ ಕಾರ್ಯವನ್ನು ಯುದ್ಧೋಪಾದಿಯಲ್ಲಿ ತೆಗದುಕೊಳ್ಳುವಂತೆ ಇಲ್ಲೂ ತೆಗೆದುಕೊಳ್ಳಬೇಕು.

1.10 ಪಿ.ಎಂ

ಅದೇ ರೀತಿ, ಈ ವಿಷಯವನ್ನು ಸಹ ತೆಗೆದುಕೊಂಡು ಮಂತ್ರಿಗಳು ಹಗಲು ರಾತ್ರಿ ನಿದ್ದೆ ಮಾಡದೆ, ಸ್ವತಃ ಎಲ್ಲರಿಗೂ ಫೋನ್ ಮಾಡಿ ಪ್ರತಿದಿನ ಔಷಧಿ ಸಿಂಪರಣೆಯಾಯಿತೆ, ಎಷ್ಟು ಎಕರೆಯಾಯಿತು ಎಂದು ವಿಚಾರಿಸಿದರೆ ಒಳ್ಳೆಯದು. This work should be done on war-footing. ಮಾನ್ಯ ಸದಸ್ಯರು ಹೇಳಿದ ಹಾಗೆ, ನಿಧಾನ ಮಾಡಿದ್ದಾರೆ. ಔಷಧಿ ಸಾಲದು. ಹಿರಿಯ ಸದಸ್ಯರು ಸಲಹೆ ಮಾಡಿದಂತೆ, ಔಷಧಿಯನ್ನು ಎಷ್ಟಾದರೂ ಹಾಕಿ, ನಂತರ ಬೇಕಾದರೆ ಸೆಸ್ ಹಾಕಿ. ಒಂದು ತೆಂಗಿನ ಗಿಡಕ್ಕೆ ಇಷ್ಟು ಎಂದು ಸೆಸ್ ಹಾಕಿ. ಒಂದು ಸಾರಿ ತೆಂಗಿನ ಗಿಡ ಹೋದರೆ ಮತ್ತೆ ಬೆಳೆಯುವುದಿಲ್ಲ. 50-70 ವರ್ಷ ಬೇಕಾಗುತ್ತದೆ. ಸೆಸ್ ಹಾಕಿ ಎಂದಿರುವಾಗ, ನಿಮ್ಮ ಇಲಾಖೆಗೆ ಇನ್ನೂ ಹೆಚ್ಚಿನ ಗ್ರಾಂಟ್ ತೆಗೆದುಕೊಂಡು ಆದಷ್ಟು ಬೇಗನೆ ಯುದ್ಧೋಪಾದಿಯಲ್ಲಿ ಭೂಕಂಪ, ಫ್ಲಡ್ ಬಂದಾಗ ಯಾವ ರೀತಿ ಮಾಡುತ್ತೀರೋ, ಆ ರೀತಿ ಮಾಡಬೇಕೆಂದು ನಾನು ಕೂಡ ಧ್ವನಿಗೂಡಿಸುತ್ತೇನೆ. ಬಹುಶಃ ವಿರೋಧ ಪಕ್ಷದ ನಾಯಕರು, ಈ ಕುರಿತಂತೆ ಎಲ್ಲರೂ ಮಾತನಾಡಿದ್ದಾರೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಇನ್ನೂ ಬಹಳ ಜನ ಮಾತನಾಡುವವರಿದ್ದಾರೆ, ಅದಕ್ಕೆ ಇನೂ ಹೆಚ್ಚು ಚರ್ಚೆ ಮಾಡೋಣವೆಂದು ತಾವೇ ಸದನದಲ್ಲಿ ಹೇಳಿದ್ದೀರಿ. This matter may be kept open. ಮತ್ತೆ ಅವಕಾಶ ಬೇಕೆಂದು ಪುನಃ ಕೇಳಬಾರದು. ಆದುದರಿಂದ, ಅವಕಾಶ ಕೊಟ್ಟರೆ ಒಳ್ಳೆಯದು. ಇದರ ಗಂಭೀರತೆಯನ್ನು ಗಮನಿಸಿ, ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ತಾವೇ ಹೇಳಿದಿರಿ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಈ ವಿಷಯದ ಮೇಲೆ ವಿರೋಧ ಪಕ್ಷದ ನಾಯಕರು ಅರ್ಧರ್ಧ, ಮುಕ್ಕಾಲು ಗಂಟೆ ಮಾತನಾಡಿದ್ದಾರೆ. ಈಗಾಗಲೇ ಇದರಲ್ಲೇ ಎರಡು ದಿನಗಳು ಕಳೆದಿವೆ. ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯದ ಮೇಲಿನ ಚರ್ಚೆ ಇನ್ನೂ ಪ್ರಾರಂಭವಾಗಿಲ್ಲ.

ಅಧ್ಯಕ್ಷರು : ಆ ಚರ್ಚೆಯನ್ನು ಇನ್ನು 15 ನಿಮಿಷದ ನಂತರ ಪ್ರಾರಂಭಿಸೋಣ. ವಿರೋಧ ಪಕ್ಷದ ನಾಯಕರು, ಇನ್ನೂ ಕೆಲವು ಮಾತನಾಡುವವರಿದ್ದಾರೆ. ಜೊತೆಗೆ, ಕನಿಷ್ಠ ಒಂದು ಗಂಟೆ, ಒಂದೂವರೆ ಗಂಟೆ ಅವಕಾಶ ಕೊಡುತ್ತೇನೆಂದು ನಾನೂ ಕೂಡ ಕಮಿಟ್ ಮಾಡಿಕೊಂಡಿದ್ದೆ.

ಮಧ್ಯಾಹ್ನ ವಿರೋಧ ಪಕ್ಷದ ನಾಯಕರು ಬಂದು ಮಾತನಾಡಿದ ನಂತರ, ಇದನ್ನು ಚರ್ಚೆ ತೆಗೆದುಕೊಂಡ ನಂತರ, ತಾವು ಉತ್ತರಿಸಿ.

ಶಾಸನಾತ್ಮಕ ನಿರ್ಣಯ

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ, ನಾನು ಈ ಕೆಳಕಂಡ ನಿರ್ಣಯವನ್ನು ತಮ್ಮ ಅನುಮತಿ ಕೋರಿ ಸಭೆಯ ಮುಂದೆ ಮಂಡಿಸುತ್ತೇನೆ.

"ಸಾರ್ವಜನಿಕ ಋಣ ಅಧಿನಿಯಮ, 1944ರ (1994ರ ಕೇಂದ್ರ ಅಧಿನಿಯಮ 18) ನಿರಸನಗೊಳಿಸುವುದು ಮತ್ತು ಅದರ ಬದಲಾಗಿ, ಸರ್ಕಾರಿ ಭದ್ರತೆಗಳನ್ನು ಹೊಂದಿರುವವರಿಗೆ ದಕ್ಷ ಹಾಗೂ ಸುಧಾರಿತ ಸೇವೆಯನ್ನು ಒದಗಿಸಲು ಭಾರತದ ರಿಸರ್ವ್ ಬ್ಯಾಂಕಿಗೆ ಸಾಧ್ಯವಾಗುವಂತೆ ಮಾಡುವುದು".

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಸಾರ್ವಜನಿಕ ಋಣ ಅಧಿನಿಯಮ 1994ರ (1994ರ ಕೇಂದ್ರ ಅಧಿನಿಯಮ 18) ನಿರಸನಗೊಳಿಸುವುದು ಮತ್ತು ಅದರ ಬದಲಾಗಿ, ಸರ್ಕಾರಿ ಭದ್ರತೆಗಳನ್ನು ಹೊಂದಿರುವವರಿಗೆ ದಕ್ಷ ಹಾಗೂ ಸುಧಾರಿತ ಸೇವೆಯನ್ನು ಒದಗಿಸಲು ಭಾರತದ ರಿಸರ್ವ್ ಬ್ಯಾಂಕಿಗೆ ಸಾಧ್ಯವಾಗುವಂತೆ ಮಾಡುವುದು".

ನಿರ್ಣಯವನ್ನು ಮಂಡಿಸಲಾಯಿತು

ನಿರ್ಣಯದ ಅಂಗೀಕಾರ

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ, ಸಾರ್ವಜನಿಕ ಋಣ ಅಧಿನಿಯಮ, 1994ರ (1994ರ ಕೇಂದ್ರ ಅಧಿನಿಯಮ 18) ನಿರಸನಗೊಳಿಸುವುದು ಮತ್ತು ಅದರ ಬದಲಾಗಿ, ಸರ್ಕಾರಿ ಭದ್ರತೆಗಳನ್ನು ಹೊಂದಿರುವವರಿಗೆ ದಕ್ಷ ಹಾಗೂ ಸುಧಾರಿತ ಸೇವೆಯನ್ನು ಒದಗಿಸಲು ಭಾರತದ ರಿಸರ್ವ್ ಬ್ಯಾಂಕಿಗೆ ಸಾಧ್ಯವಾಗುವಂತೆ ಮಾಡುವುದು".

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಸಾರ್ವಜನಿಕ ಋಣ ಅಧಿನಿಯಮ 1994ರ (1994ರ ಕೇಂದ್ರ ಅಧಿನಿಯಮ 18) ನಿರಸನಗೊಳಿಸುವುದು ಮತ್ತು ಅದರ ಬದಲಾಗಿ, ಸರ್ಕಾರಿ ಭದ್ರತೆಗಳನ್ನು ಹೊಂದಿರುವವರಿಗೆ ದಕ್ಷ ಹಾಗೂ ಸುಧಾರಿತ ಸೇವೆಯನ್ನು ಒದಗಿಸಲು ಭಾರತದ ರಿಸರ್ವ್ ಬ್ಯಾಂಕಿಗೆ ಸಾಧ್ಯವಾಗುವಂತೆ ಮಾಡುವುದು".